

# ಸಿಹಿ ಕಹಿ

ಸಂಪಾದಕರು : ಮಾರುತಿ ಬಸವಂತಪ್ಪ ಹೊಸಮನಿ
Editor: MARUTIBASAVANTAPPAHOSAMANI
Cell : +91 9741319119

ಕನ್ನಡ ದಿನಪತ್ರಿಕೆ, ಬಾಗಲಕೋಟೆ
ಬಾಗಲಕೋಟೆಯಿಂದ ಪ್ರಕಟಿತ
RNI REG No. : KARKAN/2016/75068

SIHI KAHI
KANNADA DAILY MORNING
BAGALKOT

Volume : 06 Issue : 295 Sunday 04-08-2024 E-mail : maruti.b.hosamani76@gmail.com Page: 4 Price : Rs. 1/-


# "ನುಡಿ ಮುತ್ತು" ಸಿನಿಮಾ ಲಿರಿಕಲ್ ವಿಡಿಯೋ ಬಿಡುಗಡೆ




**ನೆಲಮಂಗಲ:** ಭೈರವಿಕ್ರಿಯೇಷನ್ಸ್‌ಅವರಗೀತಾ ಎ.ವಿ ನಿರ್ಮಾಣದ 'ನುಡಿ ಮುತ್ತು' ಕನ್ನಡ ಮಕ್ಕಳ ಚಲನ ಚಿತ್ರದ "ಸೇರಿಸಿ ಸೇರಿಸಿ ಸರ್ಕಾರಿ ಶಾಲೆಗೇ" ಎಂಬ ಲಿರಿಕಲ್ ವಿಡಿಯೋವನ್ನು ನೆಲಮಂಗಲದ ಭೈರವಿ ನೃತ್ಯ ಮಂದಿರದಲ್ಲಿ ಬಾಲನಟಿ ಭೈರವಿ ಮತ್ತು ಲೇಖಿನ ಜೊತೆ ಬಿಡುಗಡೆ ಮಾಡಲಾಯಿತು.

ನೆಲಮಂಗಲ ತಾಲ್ಲೂಕಿನ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಪ್ರಕಾಶ ಅವರು ಪೋಷಕರು ಖಾಸಗಿ ಶಾಲೆಗಳ ವ್ಯಾಮೋಹಕ್ಕೆ ಒಳಗಾಗದೆ ತಮ್ಮ ಮಕ್ಕಳ ಉತ್ತಮ ಭವಿಷ್ಯಕ್ಕಾಗಿ ಸರ್ಕಾರಿ ಶಾಲೆಗೆ ಮಕ್ಕಳನ್ನು ಸೇರಿಸಬೇಕು. ಈ ಹಾಡಿನಲ್ಲಿ ಕನ್ನಡ ಭಾಷೆಗೆ ಮತ್ತು ಸರ್ಕಾರಿ ಶಾಲೆಗೆ ಒಂದು ಒಳ್ಳೆಯ ಸಂದೇಶ ರವಾನೆಯಾಗಿದೆ ಈ ಪ್ರಯತ್ನಕ್ಕೆ ಒಳ್ಳೆಯ ಫಲ ದೊರೆಯಲಿ ಎಂದು ಹಾರೈಸಿದರು. ಈ ಚಿತ್ರದ ಮುಖ್ಯ ಪಾತ್ರದಲ್ಲಿ ಅಭಿನಯ ಮಾಡಿರುವ ಭೈರವಿ ಬಾಲ ನಟಿಯಾಗಿ, ನೃತ್ಯ ಮಾಡುವುದರಲ್ಲಿ, ಲೀಲಾ ಜಾಲವಾಗಿ ಅಭಿನಯ ಮಾಡುವುದರಲ್ಲಿ, ವೇದಿಕೆಯಲ್ಲಿ ಭಯವಿಲ್ಲದೆ ಸಂಭಾಷಣೆ ಮಾಡುವುದರಲ್ಲಿ ನಿಪುಣಳು ಆಗಿದ್ದು ಹಲವು ರಿಯಾಲಿಟಿ ಶೋಗಳಲ್ಲಿ ಹಾಗೂ ಧಾರಾವಾಹಿಗಳಲ್ಲಿ ಅಭಿನಯ ಮಾಡಿದ್ದಾಳೆ. ಈಕೆ ಸರ್ಕಾರಿ ಶಾಲೆಯಲ್ಲಿ ಓದುತ್ತಿದ್ದು ಸಿನಿಮಾದಸ್ವಲ್ಪಭಾಗಭೈರವಿಯಜೀವನದನೈಜ ಘಟನೆಯಾಗಿದೆ. ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಆವತಿ, ಕೋರಮಂಗಲ, ತುಮಕೂರು ಜಿಲ್ಲೆಯ ಹುಲಿಯೂರು ದುರ್ಗ, ರಾಮನಗರ ಜಿಲ್ಲೆಯ ಕೋಡಂಬಳ್ಳಿ ಮೊದಲಾದ ಕಡೆ ಚಿತ್ರೀಕರಣ ಮಾಡಲಾಗಿದೆ ಎಂದು ಸಹ ನಿರ್ಮಾಪಕ ಮನೋಜ್ ಬಾಬು ತಿಳಿಸಿದರು. ಸಮಾರಂಭದಲ್ಲಿ ವಕೀಲರಾದ ಹುಲುಕುಂಟೆ ಮಹೇಶ್, ಮಹಿಳಾ ಮುಖಂಡರಾದ ರಾಧಾಮಣಿ, ನಿರ್ದೇಶಕ ಕಾರ್ತಿಕ್ ರಾಂ ಮತ್ತಿತರರು ಉಪಸ್ಥಿತರಿದ್ದರು.

ತಾರಾಗಣದಲ್ಲಿ ಭೈರವಿ,ಗನಿಕಾ,ಲಿಖಿತ,ಕೀರ್ತಿ, ರೋಜಾ, ನೊಣವಿನಕೆರೆ ರಾಮಕೃಷ್ಣಪ್ಪ,, ಭುವನ,ಕುರಿ ಗಂಗೂ, ಮನೋಜ್ ಬಾಬು, ಸೂರ್ಯ ಪಿ.ಜೇ ಕೋಬ್ರಾ, ನಾಗರಾಜ್, ಶ್ರೀನಿಧಿ ಭಟ್, ಪ್ರಜ್ವಲ್ ,ರಾಜೇಶ್ವರಿ, ನವ್ಯಶ್ರೀ, ವಿನಾಯಕ ಕುಲಕರ್ಣಿ,ಚಿರಂಜೀವಿ ಕೋರಮಂಗಲ ಏಕನಾಥ್, ಚೇತನ್, ಕಾರ್ತಿಕ್, ಮಲ್ಲಿಕಾರ್ಜುನ, ಸಂದರ್ಶ, ಲೋಕೇಶ್,. ಯಶೋದಮ್ಮ, ಪುಟ್ಟಸ್ವಾಮಿ, ಮಹೇಶ್, ಅಭಿಷೇಕ್,ಅನು ಶೆಟ್ಟಿ, ಮುತ್ತು ಹಾಗೂ ದೇವರಾಜ್ ಶೆಟ್ಟಿ ಮೊದಲದವರು ಅಭಿನಯಿಸಿದ್ದಾರೆ. ಛಾಯಾಗ್ರಹಣ ಮೈಸೂರ್ ಸೋಮು ,ಧ್ವನಿಮುದ್ರಣ ಹರಿಚರಣ್,ಸಂಗೀತ ಶಿವಸತ್ಯ, ಸಾಹಿತ್ಯ ಶಿವಸತ್ಯ, ಶ್ರೀ ಕಾರ್ತಿಕ್ ರಾಂ , ಸಂಕಲನ ಮತ್ತು ಗ್ರಾಫಿಕ್ಸ್ ಅಭಿಷೇಕ್ ರಾವ್ ,ಪತ್ರಿಕಾ ಸಂಪರ್ಕ ಡಾ.ಪ್ರಭು ಗಂಜಿಹಾಳ, ಡಾ.ವೀರೇಶ ಹಂಡಿಗಿ , ಸಹ ನಿರ್ದೇಶನ ಸುಬಿನ್, ಮನೋಜ್ ಬಾಬು, ನವ್ಯಶ್ರೀ, ಕಥೆ–ಚಿತ್ರಕಥೆ–ನಿರ್ದೇಶನ ಶ್ರೀ ಕಾರ್ತಿಕ್ ರಾಮ್, ಸಹ ನಿರ್ಮಾಪಕರು ಮನೋಜ್ ಬಾಬು , ಚಿತ್ರಕ್ಕೆ ಸಹಕಾರ ಕೃಷ್ಣಮೂರ್ತಿ ಚನ್ನಪಟ್ಟಣ, ಮಹೇಶ್ ಸುಳ್ಳೇರಿ, ಪುಟ್ಟಸ್ವಾಮಿ ಬಲ್ಲಾಪಟ್ಟಣ, ಈ ರಾಜಣ್ಣ ಬಲ್ಲಾಪಟ್ಟಣ, ನಯಾಜ್ ಪಾಸಾಬಲ್ಲಪಟ್ಟಣ, ನರಸಿಂಹಮೂರ್ತಿ, ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಕೋರಮಂಗಲ, ಚೇತನ್ ಕೋರಮಂಗಲ. ನಾಗರಾಜು, ಮುಖ್ಯಶಿಕ್ಷಕರು, ಸರ್ಕಾರಿ ಶಾಲೆ, ಕೋಡಂಬಳ್ಳಿ ಅವರದಿದೆ. ಶೀಘ್ರದಲ್ಲೇ ಚಿತ್ರವನ್ನು ಬೆಳ್ಳಿ ತೆರೆಗೆ ತರಲಾಗುವದು ಎಂದು ನಿರ್ಮಾಪಕಿ ಗೀತಾ.ಎ.ವಿ.ತಿಳಿಸಿದ್ದಾರೆ.

**ವರದಿ : ಡಾ.ಪ್ರಭು ಗಂಜಿಹಾಳ**
**ಮೊ:9448775346**

# ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ವತಿಯಿಂದ ಕುಮಾರಿ ದಾವಲಬಿ ರಾಜೇಸಾಬ ಡಂಗಿ ಇವರಿಗೆ ರಾಜ್ಯ ಮಟ್ಟದ ಪ್ರಶಸ್ತಿ



**ಕಣಬೂರ :** ವಿಜಯಪುರ ಜಿಲ್ಲೆಯ ಕೊನೆಯ ಗ್ರಾಮವಾದ ಕಣಬೂರ ಗ್ರಾಮದ ಪ್ರತಿಭಾವಂತ ಉಪನ್ಯಾಸಕಿ ಯೊಬ್ಬರು ರಾಜ್ಯ ಮಟ್ಟದ ಅತ್ಯುತ್ತಮ ಉಪನ್ಯಾಸಕಿ ಪ್ರಶಸ್ತಿಗೆ ಭಾಜನ ರಾಗುವುದರ ಮೂಲಕ ಬಬಲೇಶ್ವರ ತಾಲೂಕಿನ ಕೀರ್ತಿಗೆ ಪಾತ್ರರಾಗಿರುತ್ತಾರೆ.

ಅಲ್ಪಸಂಖ್ಯಾತರ ಇಲಾಖೆಯ ವತಿಯಿಂದಕೊಡಮಾಡುವರಾಜ್ಯ ಮಟ್ಟದ ಅತ್ಯುತ್ತಮ ಉಪನ್ಯಾಸಕಿ ಪ್ರಶಸ್ತಿಯನ್ನು ಸ್ವೀಕರಿಸಿದ್ದು ಹೆಮ್ಮೆಯ ವಿಷಯವಾಗಿದೆ.

ಕುಮಾರಿ ದಾವಲಬಿ.ರಾಜೇಸಾಬ. ಡಂಗಿ ಇವರು ವಿಜಯಪುರ ಜಿಲ್ಲೆಯ ಬಬಲೇಶ್ವರ ತಾಲೂಕಿನ ಕಣಬೂರ ಗ್ರಾಮದವರು, ಅಲ್ಪಸಂಖ್ಯಾತರ ವತಿಯಿಂದ ಡಾ. ಎ.ಪಿ.ಜೆ ಅಬ್ದುಲ್ ಕಲಾಂ ವಸತಿ ಪದವಿ ಪೂರ್ವ ಕಾಲೇಜು ಅರಕೇರಿಯಲ್ಲಿ ಇತಿಹಾಸ ಶಾಸ್ತ್ರದಲ್ಲಿ ಉಪನ್ಯಾಸಕಿಯಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ.

2023–24 ಸಾಲಿನ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ತಾವು ಬೋಧಿಸಿದ ಇತಿಹಾಸ ವಿಷಯದಲ್ಲಿ ವಿದ್ಯಾರ್ಥಿಗಳು ಉತ್ತಮ ಗುಣಾತ್ಮಕ ಶೇ.100 ಫಲಿತಾಂಶ ಪಡೆದಿರುತ್ತಾರೆ. ಈ ಸಾಧನೆಯನ್ನು ಗುರುತಿಸಿ ಅತ್ಯುತ್ತಮ ಉಪನ್ಯಾಸಕಿ ಎಂದು ಅಲ್ಪಸಂಖ್ಯಾತರ ನಿರ್ದೇಶನಾಲಯ ವತಿಯಿಂದ ಅಭಿನಂದಿಸಿದೆ. ದಿನಾಂಕ 29 7 2024 ರಂದು ಸೋಮವಾರ ದಂದು ಬೆಂಗಳೂರಿನಲ್ಲಿ ಏರ್ಪಡಿಸಿದ ರಾಜ್ಯಮಟ್ಟದ ಅತ್ಯುತ್ತಮ ಉಪನ್ಯಾಸಕಿ ಪ್ರಶಸ್ತಿ ಹಾಗೂ ಅಭಿನಂದನಾ ಪ್ರಮಾಣ ಪತ್ರವನ್ನು ವಸತಿ ಹಾಗೂ ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಸಚಿವರಾದ ಶ್ರೀ ಬಿ.ಝೆಡ್ ಜಮೀರ್ ಅಹ್ಮದ್ ಖಾನ್ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಸಚಿವರು ಈ ಪ್ರಶಸ್ತಿ ನೀಡಿ ಸನ್ಮಾನಿಸಿ ಅಭಿನಂದಿಸಿದರು. ಪ್ರಾಥಮಿಕ ಶಿಕ್ಷಣ ಸ್ವ ಗ್ರಾಮದ ಕಣಬೂರನಲ್ಲಿ ಮುಗಿಸಿ, ಪ್ರೌಢ ಶಾಲೆ ಹಾಗೂ ಪದವಿ ಪೂರ್ವ ಶಿಕ್ಷಣ ಎನ್ ಜಿ ಎಚ್ ಎಸ್ ಗಲಗಲಿ, ಬಿ ಎಡ್ ಪದವಿ ಶಂಕ–ರೇಗೌಡ ಬಿಎಡ್ ಕಾಲೇಜು ಮಂಡ್ಯ, ಸ್ನಾತ್ತಕೋತರ ಪದವಿ ಮುಕ್ತ ವಿಶ್ವವಿದ್ಯಾಲಯ ಮೈಸೂರಿನಲ್ಲಿ ಪೂರ್ಣಗೊಳಿಸಿ 2021 ರಲ್ಲಿ ಅಲ್ಪಸಂಖ್ಯಾತರ ಇಲಾಖೆಯ ಉಪನ್ಯಾಸಕಿಯಾಗಿ ಆಯ್ಕೆ ಗೊಂಡಿದ್ದರು.

ಒಟ್ಟು 7 ಸರ್ಕಾರಿ ಉದ್ಯೋಗಕ್ಕೆ ಸ್ಪರ್ಧಾತ್ಮಕ ಪರೀಕ್ಷೆಗಳ ಮೂಲಕ ಆಯ್ಕೆ ಯಾದವರು ಇವರು. ಸುಮಾರು 10 ವರ್ಷಗಳ ಕಾಲ ಸಾರ್ವಜನಿಕಶಿಕ್ಷಣಇಲಾಖೆಯಲ್ಲಿ ಪ್ರಥಮ ದರ್ಜೆ ಸಹಾಯಕಳಾಗಿ ಸೇವೆ ಸಲ್ಲಿಸಿದ್ದಾರೆ.

ವಿದ್ಯಾರ್ಥಿಗಳಿಗೆ ಒಳ್ಳೆಯ ಗುಣಮಟ್ಟದ ಶಿಕ್ಷಣವನ್ನು ನೀಡುತ್ತಿರುವ ಉಪನ್ಯಾಸಕಿ ಕುಮಾರಿ ದಾವಲಬಿ ರಾಜೇಸಾಬ ಡಂಗಿ ಇವರ ಕರ್ತವ್ಯ ನಿಷ್ಠೆಗೆ ಒಲಿದ ಗೌರವ ತಂದಿದ್ದು ವಿಜಯಪುರ ಜಿಲ್ಲೆಯ ಅಲ್ಪಸಂಖ್ಯಾತರ ಇಲಾಖೆಯ ಜಿಲ್ಲಾಧಿಕಾರಿ ಪ್ರಶಾಂತ್ ಪೂಜಾರಿ ಹರ್ಷ ವ್ಯಕ್ತಪಡಿಸಿದರು.

ಅದೇ ರೀತಿಯಾಗಿ ಕಣಬೂರ ಗ್ರಾಮದ ಗುರು ಹಿರಿಯರು ಹರ್ಷವನ್ನು ವ್ಯಕ್ತಪಡಿಸಿದರು.

**ತಾಲೂಕ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್: ಪ್ರತಾಪ್ ವಾಯ್ ಕಿಳ್ಳಿ ಇಲಕಲ್ಲ.**

# ಘಟಪ್ರಭಾ ನದಿಯ ಆರ್ಭಟ: ವಡೇರಹಟ್ಟಿ, ಹುಣಶ್ಯಾಳ, ಮುಸಗುಪ್ಪಿಯಲ್ಲಿ ಕಾಳಜಿ ಕೇಂದ್ರಗಳ ಸ್ಥಾಪನೆ




**ಮೂಡಲಗಿ :** ಸತತ ಮಳೆಯ ಪ್ರಭಾವದಿಂದ ನದಿ ಪಾತ್ರದ ಜನರ ತೆರವು ಕಾರ್ಯಾರಣೆ ಹಾಗೂ ಕಾಳಜಿ ಕೇಂದ್ರಗಳನ್ನು ಸ್ಥಾಪಿಸುವಲ್ಲಿ ತಹಶೀಲ್ದಾರ ಮಹಾದೇವ ಸನಮೂರಿ ನೇತೃತ್ವದಲ್ಲಿ ತಾಲೂಕಾ ಪಂಚಾಯತ ಅಧಿಕಾರಿಗಳು ಹಾಗೂ ಕ್ಷೇತ್ರ ಶಿಕ್ಷಣಾದಿಕಾರಿಗಳ ತಂಡ ಕಾರ್ಯ ಪ್ರವರ್ತರಾದರು, ನದಿಯ ನೀರು ಬರುವ ಗ್ರಾಮಗಳ ತೋಟಗಳಲ್ಲಿ ವಾಸಿಸುತ್ತಿರುವ ಜನರಿಗೆ ಹುಣಶ್ಯಾಳ ಪಿ ಜಿ, ಹಾಗೂ ವಡೇರಹಟ್ಟಿಯ ಸರ್ಕಾರಿ ಪ್ರೌಡ ಶಾಲೆಯಲ್ಲಿ ಮತ್ತು ಮುಸಗುಪ್ಪಿಯಲ್ಲಿ ಕಾಳಜಿ ಕೇಂದ್ರಗಳನ್ನು ಪ್ರಾರಂಬಿಸಲಾಗಿದೆ, ಸದ್ಯ 60 ಜನರು ಕಾಳಜಿ ಕೇಂದ್ರಕ್ಕೆ ಬಂದಿದ್ದು ಇನ್ನಷ್ಟು ನೀರು ಹೆಚ್ಚಾಗುವ ಸಾಧ್ಯತೆ ಇದ್ದು ಸಾಧ್ಯವಾದಷ್ಟು ಜನರು ತಾಲೂಕಾಡಳಿತ ಅಧಿಕಾರಿಗಳ ಮನವಿಗೆ ಎತ್ತರದ ಪ್ರದೇಶಗಳಿಗೆ ಜಾನುವಾರಗಳ ಸಮೇತ ಸ್ಥಳಾಂತರವಾಗಬೇಕು ಎಂದು ತಾಲೂಕಾ ದಂಡಾಧಿಕಾರಿ ಮಹಾದೇವ ಸನಮೂರಿ ತಿಳಿಸಿದರು, ಶುಕ್ರವಾರ ಮತ್ತೆ ಹಿಡಕಲ್ ಜಲಾಶಯದಿಂದ 10 ಸಾವಿರ ಕ್ಯೂಸೆಕ್ಸ ನೀರು ಬಿಡುಗಡೆ ಮಾಡುವದರಿಂದ 40486 ಕ್ಯೂಸೆಕ್ಸ ನೀರು ಘಟಪ್ರಭಾ ನದಿಗೆ ಬರುತ್ತಿದ್ದು ಜನರು ಸುರಕ್ಷಿತ ಸ್ಥಳಗಳಿಗೆ ತೆರಳಬೇಕೆಂದರು,

ಈ ಸಮಯದಲ್ಲಿ ತಾಲೂಕಾ ಪಂಚಾಯತ ನರೇಗಾ ಅಧಿಕಾರಿ ಚಂದ್ರಶೇಖರ ಬಾರ್ಕಿ,ಕ್ಷೇತ್ರ ಶಿಕ್ಷಣಾಧಿಕಾರಿ ಅಜೀತ ಮನ್ನಿಕೇರಿ, ಪಿ ಡಿ ಓ ಶಿವಾನಂದ ಗುಡಸಿ ಇದ್ದರು.

# ತಂಬ್ರಳ್ಳಿ ದಂಪತಿಗಳಿಗೆ ಸನ್ಮಾನ



**ಕೊಪ್ಪಳ :** ನಗರದ ಖಾಸಗಿ ಹೋಟೆಲ್ ಸಭಾಂಗಣದಲ್ಲಿ ಶನಿವಾರ ಸಂಜೆ ಜರುಗಿದ ಗಾಯಕ ಮೊಹಮ್ಮದ್ ರಫಿ ರವರ ಸ್ಮರಣೆಗಾಗಿ ಏರ್ಪಡಿಸಿದ ರಸಮಂಜರಿ ಕಾರ್ಯಕ್ರಮದಲ್ಲಿ ಮೆಲೋಡಿ ಫ್ರೆಂಡ್ಸ್ ಆರ್ಕೆಸ್ಟ್ರಾ ವತಿಯಿಂದ ಕೊಪ್ಪಳ ಇನ್ನರ್ ವಿಲ್ ಕ್ಲಬ್ ಅಧ್ಯಕ್ಷರಾದ ಶ್ರೀಮತಿ ಉಮಾ ಮಹೇಶ್ ತಂಬ್ರಳ್ಳಿ ದಂಪತಿಗಳಿಗೆ ಸನ್ಮಾನಿಸಲಾಯಿತು

ಈ ಸಂದರ್ಭದಲ್ಲಿ ಲ್ಯಾಂಡ್ ಡೆವಲಪರ್ ಜಾಕಿರ್ ಹುಸೇನ್ ಖಾನ್ ಕುಷ್ಟಗಿ ಕಾರ್ಯಕ್ರಮ ಸಂಘಟಕರಾದ ಸೈಯದ ಇಮಾಮ್ ಹುಸೇನ್ ಸಿಂದಗಿ ಹಿರಿಯ ಶಿಕ್ಷಕರಾದ ಶಮೀ ಮುನ್ನಿಸ ಬೇಗಂ ಹಿರಿಯ ಪತ್ರಕರ್ತ ಎಂ ಸಾಧಿಕ ಅಲಿ ಗಾಯಕರಾದ ನ್ಯಮತ್ ಹುಸೇನ್ ಮತ್ತು ದಾವುದ ಹುನಗುಂದ ಸೇರಿದಂತೆ ಅನೇಕರು ಪಾಲ್ಗೊಂಡಿದ್ದರು.

# ಬಿಮ್ಸ್‌ನಲ್ಲಿ ಸಾಂಸ್ಕೃತಿಕ ಹಬ್ಬ–ಕಲಾ ಪರ್ವ

## ಮನುಷ್ಯನ ಪರಿಪೂರ್ಣತೆಗೆ ಸಂಸ್ಕೃತಿ ಮತ್ತು ಕಲೆ ಅಗತ್ಯ: ಡಾ. ಶಂಭು ಬಳಿಗಾರ




**ಬಾಗಲಕೋಟೆ:** ಮನುಷ್ಯನ ಪರಿಪೂರ್ಣತಗೆ ಸಂಸ್ಕೃತಿ ಮತ್ತು ಕಲೆ ಅಗತ್ಯವಾಗಿದ್ದು, ಪಠ್ಯದ ಜೊತೆಗೆ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ವಿದ್ಯಾರ್ಥಿಗಳು ಭಾಗವಹಿಸಬೇಕೆಂದು ನಿವೃತ್ತ ಪ್ರಾಚಾರ್ಯರು ಹಾಗೂ ಖ್ಯಾತ ಜಾನಪದ ವಿದ್ವಾಂಸರಾದ ಡಾ. ಶಂಭು ಬಳಿಗಾರ ಹೇಳಿದರು.

ವಿದ್ಯಾಗಿರಿಯಲ್ಲಿರುವ ಪ್ರತಿಷ್ಠಿತ ಎಂ.ಬಿ.ಎ ಸಂಸ್ಥೆಯಾದ ಬಿ.ವಿ.ವಿ. ಸಂಘದ, ಎನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜಮೆಂಟ್ ಸ್ಟಡೀಸ್, (ಬಿಮ್ಸ್) ವತಿಯಿಂದ ಶುಕ್ರವಾರ ಬಿಮ್ಸ ಸಭಾಭವನದಲ್ಲಿ ನಡೆದ ಒಂದು ದಿನದ ಬಿಮ್ಸ್ ಕಲಾ ಪರ್ವ ಸಾಂಸ್ಕೃತಿಕ ಹಬ್ಬವನ್ನು ಉದ್ಘಾಟಿಸಿ ಮಾತನಾಡಿದರು.

ವಿದ್ಯಾರ್ಥಿಗಳಿಗೆ ಸಂಸ್ಕೃತಿ ಸಂಸ್ಕಾರದ ರೂಪವನ್ನು ಕಲಿಸಿದರೆ, ಕಲೆ ಸೌಂದರ್ಯದ ಮನಸ್ಸನ್ನು ಅರಳಿಸುತ್ತದೆ, ಪ್ರಧಾನವಾದ ಲಲಿತ ಕಲೆಗಳು ಮನುಷ್ಯನ ಬದುಕಿಗೆ ಪೂರಕವಾಗಿವೆ, ಬದುಕಿನಲ್ಲಿ ಮಾತು ನಮ್ಮ ಸಂಸ್ಕೃತಿಯನ್ನು ತಿಳಿಸುತ್ತದೆ, ವಿವೇಕದಲ್ಲಿ ವಿನಯ ಬೇರೆತಾಗ ಜೀವನ ಅರಳುವುದು, ಎಲ್ಲ ವಿದ್ಯಾರ್ಥಿಗಳಲ್ಲಿ ತಮ್ಮದೆಯಾದ ಶಕ್ತಿ ಸಾಮರ್ಥ್ಯವಿದ್ದು ಅದನ್ನು ಇಂಥಹ ಸಾಂಸ್ಕೃತಿಕ ವೇದಿಕೆ ಮೂಲಕ ಹೊರ ತರುವ ಪ್ರಯತ್ನವೇ ಈ ಕಲಾ ಪರ್ವದ ಮೂಲ ಉದ್ದೇಶವಾಗಿದೆ, ವಿದ್ಯಾರ್ಥಿಗಳ ಶೈಕ್ಷಣಿಕ ಈ 25 ವರ್ಷ, ಜೀವನದ 75 ವರ್ಷಕ್ಕೆ ಸಮ ಆದ್ದರಿಂದ ವಿದ್ಯಾರ್ಥಿಗಳು ಯಾವುದೆ ಆಕರ್ಷಣೆಗೆ ಒಳಗಾಗಗದೆ ಶೈಕ್ಷಣಿಕ ಅಧ್ಯಯನದಲ್ಲಿನ ಪ್ರತಿಕ್ಷಣವು ಜ್ಞಾನದ ಅರಿವಿಗಾಗಿ ಬಳಸಿ, ಜೊತೆಗೆ ಇಂಥಹ ಸಾಂಸ್ಕೃತಿಕ ಹಬ್ಬಗಳಲ್ಲಿ ಭಾಗವಹಿಸಿ, ಮನುಷ್ಯನ ಪರಿಪೂರ್ಣತೆಗೆ ಸಂಸ್ಕೃತಿ ಮತ್ತು ಕಲೆ ಅಗತ್ಯವಾಗಿವೆ ಎಂದರು.

ಕಾಲೇಜುಗಳ ಆಡಳಿತ ಮಂಡಳಿ ಕಾರ್ಯಾಧ್ಯಕ್ಷ ಗುರುಬಸವ ಸೂಳಿಬಾವಿ ಮಾತನಾಡಿ ಬಿ.ವಿ.ವಿ. ಸಂಘದ, ಎನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜಮೆಂಟ್ ಸ್ಟಡೀಸ್, (ಬಿಮ್ಸ್) ಈಗ 25 ನೇ ವರ್ಷದಲ್ಲಿ ಮುನ್ನಡಯತ್ತಿದ್ದು ಈ ಭಾಗದ ವಿದ್ಯಾರ್ಥಿಗಳ ಅಧ್ಯಯನಕ್ಕೆ ತನ್ನದೆಯಾದ ಕೊಡುಗೆ ನೀಡುತ್ತಿದೆ. ವಿದ್ಯಾರ್ಥಿಗಳು ತಮ್ಮ ಸುಂದರ ಬದುಕು ಕಟ್ಟಿಕೊಂಡು ಒಳ್ಳೆಯ ಪ್ರಜೆಯಾಗಿ ದೇಶಾಭಿಮಾನಿಯಾಗಿ ತಂದೆ ತಾಯಿಯ ಋಣ ತಿರಿಸುವ ಕೆಲಸ ಮಾಡಬೇಕಿದೆ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಸಂಘದ ಗೌರವ ಕಾರ್ಯದರ್ಶಿ
ಮಹೇಶ ಅಥಣಿ ಅವರು ಮಾತನಾಡಿ ಸಂಘದ ಕಾರ್ಯಾಧ್ಯಕ್ಷರಾದ ಡಾ.ವೀರಣ್ಣ ಚರಂತಿಮಠ ಅವರ ನೇತೃತ್ವದಲ್ಲಿ ಬಿಮ್ಸ್ ಸಂಸ್ಥೆ ಯಶಸ್ವಿಯ ದಾರಿಯಲ್ಲಿ ಸಾಗುತ್ತಿದ್ದು, ಪ್ರೊ. ಆರ್.ಜಿ.ಅಳ್ಳಗಿ ಅವರ ಅಪಾರ ಕೊಡುಗೆ ಅಪಾರವಾಗಿದೆ, ಕಲೆ ಈ ನೆಲದ ಸಾಂಸ್ಕೃತಿಕ ಸೊಗಡು, ಇದು ಮನಷ್ಯನ ಮನಸ್ಸನ್ನು ಅರಳಿಸುತ್ತದೆ. ಇಂಥ ಕಲೆಯ ಮೂಖಾಂತರ ವಿದ್ಯಾರ್ಥಿಗಳಲ್ಲಿ ಪ್ರತಿಭೇ ಅನಾವರಣಗೊಳ್ಳಲಿ ಎಂದರು.

ಇದೆ ಸಂದರ್ಭದಲ್ಲಿ ಡಾ.ಶಂಭು ಬಳಿಗಾರ ಅವರನ್ನು ಸನ್ಮಾನಿಸಿ ಗೌರವಿಸಲಾಯಿತು. ಸಂಸ್ಥೆಯ ನಿರ್ದೇಶಕರಾದ ಡಾ॥ ಪ್ರಕಾಶ್ ಕೆ. ವಡವಡಗಿಯವರು ಸ್ವಾಗತಿಸಿದರು, ಕಾರ್ಯಕ್ರಮ ಸಂಯೋಜಕಿ ಶೃತಿ ವಾರದ ಪ್ರಸ್ತಾವಿಕ ಮಾತನಾಡಿದರು, ವಿದ್ಯಾರ್ಥಿನಿ ವಾಸವಿ ಮತ್ತು ಸಂಗಡಿಗರು ಪ್ರಾರ್ಥಿಸಿದರು. ಹರ್ಷಿತ ಅಂಗಡಿ,ನಿಕಿತಾ ಎಡಿಕೆ ಕಾರ್ಯಕ್ರಮ ನಿರೂಪಿಸಿದರೆ, ಹರಿಪ್ರೀಯಾ ಎಂಚಲ್ಲಿ ವಂದಿಸಿದರು. ಕಾರ್ಯಕ್ರಮದಲ್ಲಿ ಬಿ.ವಿ.ವಿ ಸಂಘದ ಸದಸ್ಯರು, ವಿವಿಧ ಮಹಾವಿದ್ಯಾಲಯಗಳ ಪ್ರಾಚಾರ್ಯರು.ಸಿಬ್ಬಂದಿ ವರ್ಗ ಭಾಗವಹಿಸಿದ್ದರು.

ಬಿಮ್ಸ್ ಕಲಾ ಪರ್ವದಲ್ಲಿ ಆಯೋಜಿಸಲಾದ ಸ್ಪರ್ಧೆಗಳನ್ನು ಒಟ್ಟು ನಾಲ್ಕು ವಿಭಾಗಳಾಗಿ ವಿಂಗಡಿಸಿದ್ದು , ರಂಗೋಲಿ ಸ್ಪರ್ಧೆ, ಫೇಸ್ ಪೇಂಟಿಂಗ್, ಸಮೂಹ ನೃತ್ಯ, ಗುಂಪು ಗಾಯನಗಳಾಗಿದ್ದು ಈ ಸಾಂಸ್ಕೃತಿಕ ಹಬ್ಬದಲ್ಲಿ 20ಕ್ಕೂ ಹೆಚ್ಚಿನ ಪದವಿ 200ಕ್ಕೂ ಹೆಚ್ಚಿನ ವಿದ್ಯಾರ್ಥಿಗಳು ಭಾಗವಹಿಸಿದ್ದರು.

# ಗುರಿ ತಲುಪಲು ಗುರು ಬೇಕು: ಎಸ್.ಆರ್. ಮನಹಳ್ಳಿ




**ಬಾಗಲಕೋಟೆ :** ಬದಲಾಗುತ್ತಿರುವ ಶೈಕ್ಷಣಿಕ ವ್ಯವಸ್ಥೆಯಲ್ಲಿ ಉತ್ತಮ ಶಿಕ್ಷಕರು ಬೇಕು ಹಾಗೂ ಆರಂಭದಿಂದ ಹಿಡಿದು ಸಾಧನೆ ಮಾಡುವವರೆಗೂ ಶಿಕ್ಷಕರು ಮತ್ತು ವಿದ್ಯಾರ್ಥಿಗಳ ಸಂಬಂಧ ಹೇಗಿರಬೇಕು ಎಂದು ಬವಿವಿ ಸಂಘದ ಶಿಕ್ಷಣ ಮಹಾವಿದ್ಯಾಲಯ ಮತ್ತು ಭಾರತೀಯ ಶಿಕ್ಷಣ ಮಂಡಲವತಿಯಿಂದ ನಡೆದ ಗುರು ಪೂರ್ಣಿಮೆ ಕಾರ್ಯಕ್ರಮದಲ್ಲಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ ಎಸ್. ಆರ್. ಮನಹಳ್ಳಿ ಅವರು ಹೇಳಿದರು.

ಮುಖ್ಯ ಅತಿಥಿಗಳಾದ ಮತ್ತು ಭಾರತೀಯ ಶಿಕ್ಷಣ ಮಂಡಲದ ಅಖಿಲ ಭಾರತೀಯ ಸಂಯುಕ್ತಮಹಾಮಂತ್ರಿಡಾ.ಮೀನಾತಾಯಿ ಚಂದಾವರಕರ್ ಮಾತನಾಡಿ "ಶಿಕ್ಷಕರು ಎಲ್ಲ ಸಮಯದಲ್ಲೂ ವಿದ್ಯಾರ್ಥಿಗಳಿಗೆ ಮಾರ್ಗದರ್ಶನನೀಡಬೇಕು.""ಶಿಕ್ಷಕರಪ್ರೀತಿ ಎಂತಹದ್ದು, ಶಿಕ್ಷಕರ ಪ್ರೀತಿ, ಮಾರ್ಗದರ್ಶನ ಇದ್ದರೆ ವಿದ್ಯಾರ್ಥಿಗಳು ತಮ್ಮ ಜೀವನವನ್ನು ಉತ್ತಮ ಪ್ರಗತಿಯತ್ತ ಕೊಂಡೊಯ್ಯಲು ಸಾಧ್ಯ" ಎಂದು ಹೇಳಿದರು.

ಇನ್ನೋರ್ವಮುಖ್ಯಅತಿಥಿಗಳಾದಅರುಣಾ ರಘುವೀರ್ ಮಾತನಾಡಿ "ಪ್ರತಿಯೊಂದು ಹಂತದಲ್ಲಿ ಗುರುವಿನ ಮಾರ್ಗದರ್ಶನ ಅತಿ ಮುಖ್ಯ" ಎಂದು ಹೇಳಿದರು.

ಕಾಲೇಜಿನ ಪ್ರಾಚಾರ್ಯೆ ಡಾ. ರಾಜೇಶ್ವರಿ ತೆಗ್ಗಿ ಅವರು ಸ್ವಾಗತ ಮತ್ತು ಪರಿಚಯವನ್ನು ಮಾಡಿದರು. ಬಿ.ಇಡಿ ಪ್ರಶಿಕ್ಷಣಾರ್ಥಿಗಳಾದ ಭಾಗ್ಯವತಿ ಯಾವಗಲ್ ಮತ್ತು ಸಂಗಡಿಗರು ಪ್ರಾರಂಭಿಸಿದರು. ದಾನಮ್ಮ ಮರೆಗುದ್ದಿ ಧ್ಯೇಯ ಶ್ಲೋಕವನ್ನು ಹೇಳಿದರು. ಬಸವರಾಜ ತೋಳಮಟ್ಟಿ ಪುಷ್ಪಾರ್ಪಣೆ ನಡೆಸಿಕೊಟ್ಟರು. ಗಂಗಾ ಕೊಪ್ಪದ ಗುರು ಪೂರ್ಣಿಮೆಯ ನಿಮಿತ್ತವಾಗಿ ನಡೆಸಿದ ಚರ್ಚಾ ಸ್ಪರ್ಧೆಯ ಬಹುಮಾನ ವಿತರಣೆ ನಡೆಸಿದರು.

ಗೀತಾ ಕಂಚಿ ಶಾಂತಿ ಮಂತ್ರ ಹೇಳಿದರು ಮತ್ತು ಶ್ರೀಶೈಲ ಕುಂಬಾರ ವಂದಿಸಿದರು. ಪ್ರಥಮ ವರ್ಷದ ಪ್ರಶಿಕ್ಷಣಾರ್ಥಿಯಾದ ನೇತ್ರಾವತಿ ಕಳ್ಳಿಮನಿ ಕಾರ್ಯಕ್ರಮವನ್ನು ನಿರೂಪಿಸಿದರು.

ಕಾರ್ಯಕ್ರಮದಲ್ಲಿ ಭಾರತೀಯ ಶಿಕ್ಷಣ ಮಂಡಲದ ಶೈಕ್ಷಿಕ ಪ್ರಕೋಷ್ಠ ಪ್ರಮುಖರಾದ ಶ್ರೀಮತಿ ನಂದಾ ಪಾಟೀಲ, ಶೈಕ್ಷಿಕ ಪ್ರಕೋಷ್ಠ ಉಪಪ್ರಮುಖರಾದ ರೋಹಿಣಿ ಜೋಶಿ ಮತ್ತು ಕಾರ್ಯದರ್ಶಿಗಳಾದ ಡಾ. ವಿಜಯಲಕ್ಷ್ಮಿ ಪಿ. ಹೊಸಕೇರಿಯವರು ಉಪಸ್ಥಿತರಿದ್ದರು.

# ಬಲಿಷ್ಠ ಭಾರತ ನಿರ್ಮಾಣಕ್ಕಾಗಿ ಮತದಾನ ಮಾಡಿ: ಪ್ರೊ. ಎಸ್.ಎಂ. ಐಹೊಳೆ



**ಮೂಡಲಗಿ :** ಬಲಿಷ್ಠ ಭಾರತದ ನಿರ್ಮಾಣದಲ್ಲಿ ಮತದಾನ ತುಂಬಾ ಮಹತ್ವದ್ದು. ಅರ್ಹ ಅಭ್ಯರ್ಥಿಗೆ ಮತ ಚಲಾಯಿಸುವ ಮೂಲಕ ಮತದಾನದ ಮಹತ್ವ ಅರಿಯಬೇಕು. ಆಸೆ ಆಮಿಷಗಳಿಗೆ ಒಳಗಾಗದೆ, ಪ್ರಾಮಾಣಿಕತೆಯಿಂದ ಮತ ಚಲಾಯಿಸಬೇಕು ಎಂದು ರಾಯಭಾಗದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ರಾಜ್ಯಶಾಸ್ತ್ರ ಅಧ್ಯಾಪಕ ಪ್ರೊ. ಎಸ್.ಎಂ. ಐಹೋಳೆ ಹೇಳಿದರು.

ಕಲ್ಲೋಳಿಯ ಶ್ರೀ ರಾಮಲಿಂಗೇಶ್ವರ ಶಿಕ್ಷಣ ಸಂಸ್ಥೆಯ ಪ್ರಥಮ ದರ್ಜೆ ಕಾಲೇಜಿನ ರಾಷ್ಟ್ರೀಯ ಸೇವಾ ಯೋಜನೆ ಘಟಕ ದತ್ತು ಗ್ರಾಮ ರಾಜಾಪೂರದಲ್ಲಿ ಹಮ್ಮಿಕೊಂಡಿರುವ 2023–24ನೇ ಸಾಲಿನ ವಾರ್ಷಿಕ ವಿಶೇಷ ಶಿಬಿರದ ಮೂರನೇ ದಿನ ಸೋಮವಾರ ಜರುಗಿದ ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಮಾತನಾಡಿದರು.


ಕಾನೂನುಗಳಅರಿವುಸಮಸ್ತಜನತೆಗೆಅವಶ್ಯಕವಾಗಿದೆ. ಕಾನೂನಿನ ತಿಳುವಳಿಕೆ ಮೂಲಕ ಶೋಷಣೆ, ಅನ್ಯಾಯ, ತೊಂದರೆಗಳಿಂದ ರಕ್ಷಿಸಿಕೊಳ್ಳಲು ಸಹಾಯಕವಾಗುತ್ತದೆ ಎಂದರು.

ಪಂಚಾಯತ ಅಭಿವೃದ್ಧಿ ಅಧಿಕಾರಿ ಉದಯಕುಮಾರ ಬೆಳ್ಳೊಡಿ ಮಾತನಾಡಿ, ಸ್ಥಳೀಯ, ರಾಜ್ಯ ಹಾಗೂ ರಾಷ್ಟ್ರೀಯ ಮಟ್ಟದಲ್ಲಿ ಜನರ ಸಮಸ್ಯೆಗಳಿಗೆ ಸ್ಪಂದಿಸಲು ಪ್ರತಿನಿಧಿಗಳ ಆಯ್ಕೆ ಮಾಡಬೇಕಾಗುತ್ತದೆ. ಅದಕ್ಕಾಗಿ ಯೋಗ್ಯ ಅಭ್ಯರ್ಥಿ ಆಯ್ಕೆಯಲ್ಲಿ ಮತದಾನ ತುಂಬಾ ಪ್ರಾಮುಖ್ಯತೆ ಹೊಂದಿದೆ.

ಮುತ್ತುರಾಜ ರಾ. ಪಾಟೀಲ ಅವರು ಅಧ್ಯಕ್ಷತೆ ವಹಿಸಿದ್ದರು. ಗ್ರಾಮ ಪಂಚಾಯದ ಸದಸ್ಯರಾದ ಗೋಪಾಲ ಕಮತಿ, ಕಾರ್ಯಕ್ರಮಾಧಿಕಾರಿ ಶಂಕರ ನಿಂಗನೂರ, ಸಹ ಕಾರ್ಯಕ್ರಮಾಧಿಕಾರಿ ಡಿ.ಎಸ್. ಹುಗ್ಗಿ, ಅಧ್ಯಾಪಕರಾದ ಆರ್.ಎಸ್. ಪಂಡಿತ, ವಿಲಾಸ ಕೆಳಗಡೆ, ಸಂಯೋಷ ಬಂದಿ, ಸಂತೋಷ ಜೋಡಕುರಳಿ, ಶಿಬಿರಾರ್ಥಿಗಳು ಉಪಸ್ಥಿತರಿದ್ದರು.

ಶಿಬಿರಾರ್ಥಿ ಪೂಜಾ ಗುಡಗುಡಿ, ಪುಂಡಲಿಕ ವಾಲಿಕಾರ ನಿರೂಪಿಸಿದರು. ಸೌಂದರ್ಯ ಪಡದಲ್ಲಿ ಸ್ವಾಗತಿಸಿದರು. ಭಾಗ್ಯಾ ಮತ್ತು ಲಕ್ಷ್ಮಿ ಪ್ರಾರ್ಥಿಸಿದರು. ರೇವಪ್ಪ ಅರಸಪ್ಪಗೋಳ ವಂದಿಸಿದರು.

## ರಾಜ್ಯದಲ್ಲಿ 5 ಪಾಸ್‌ಪೋರ್ಟ್ ಸೇವಾ ಕೇಂದ್ರಗಳು ಮತ್ತು 23 ಅಂಚೆ ಕಛೇರಿಗಳಲ್ಲಿ ಪಾಸ್‌ಪೋರ್ಟ್ ಸೇವೆ: ಸಚಿವ ಕೀರ್ತಿ ವರ್ಧನ್‌ಸಿಂಗ್ ಮಾಹಿತಿಗೆ ಕಡಾಡಿ ಸ್ವಾಗತ



**ಮೂಡಲಗಿ :** ಪ್ರಸ್ತುತ ಬೆಂಗಳೂರಿನ ಪ್ರಾದೇಶಿಕ ಪಾಸ್‌ಪೋರ್ಟ್ ಕಚೇರಿ ಅಡಿಯಲ್ಲಿ 5 ಪಾಸ್‌ಪೋರ್ಟ್ ಸೇವಾ ಕೇಂದ್ರಗಳು ಮತ್ತು 23 ಅಂಚೆ ಇಲಾಖೆಯ ಮೂಲಕ ಪಾಸ್‌ಪೋರ್ಟ್ ಸೇವಾ ಕೇಂದ್ರಗಳು ರಾಜ್ಯದಲ್ಲಿ ಕಾರ್ಯನಿರ್ವಹಿಸುತ್ತಿವೆ ಎಂದು ಕೇಂದ್ರ ವಿದೇಶಾಂಗ ವ್ಯವಹಾರಗಳ ಸಚಿವಾಲಯದ ರಾಜ್ಯ ಸಚಿವ ಕೀರ್ತಿ ವರ್ಧನ್‌ಸಿಂಗ್ ಅವರು ಲಿಖಿತ ರೂಪದಲ್ಲಿ ಮಾಹಿತಿ ನೀಡಿದ್ದಾರೆ ಎಂದು ರಾಜ್ಯಸಭಾ ಸಂಸದ ಈರಣ್ಣ ಕಡಾಡಿ ತಿಳಿಸಿದ್ದಾರೆ.

ನವದೆಹಲಿಯಲ್ಲಿ ನಡೆಯುತ್ತಿರುವ ಮಳೆಗಾಲ ಅಧಿವೇಶದಲ್ಲಿ ಪಾಸ್‌ಪೋರ್ಟ್ ಸೇವಾ ಕೇಂದ್ರಗಳ ಕುರಿತು ಕೇಳಿದ ಪ್ರಶ್ನೆಗೆ ಉತ್ತರಿಸಿದ ಸಚಿವರು ದೇಶದಲ್ಲಿ 93 ಪಾಸ್‌ಪೋರ್ಟ್ ಸೇವಾ ಕೇಂದ್ರಗಳು ಮತ್ತು 440 ಅಂಚೆ ಇಲಾಖೆಯ ಮೂಲಕ ಪಾಸ್‌ಪೋರ್ಟ್‌ಸೇವಾಕೇಂದ್ರಗಳನ್ನು ಸ್ಥಾಪಿಸಲಾಗಿದೆ. ಬೆಂಗಳೂರನಲ್ಲಿ (ಎರಡು) ಧಾರವಾಡ–ಹುಬ್ಬಳ್ಳಿ, ಕಲಬುರಗಿ, ಮಂಗಳೂರುನಲ್ಲಿ ಪಾಸ್‌ಪೋರ್ಟ್ ಸೇವಾ ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ. ಬೆಳಗಾವಿ ಸೇರಿದಂತೆ 22 ಜಿಲ್ಲೆಗಳಲ್ಲಿ ಅಂಚೆ ಇಲಾಖೆಯ ಕಛೇರಿಯಲ್ಲಿ ಪಾಸ್‌ಪೋರ್ಟ್ ಸೇವಾ ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ. ಕಳೆದ ವರ್ಷ ರಾಜ್ಯದಲ್ಲಿ 8 ಲಕ್ಷ 35 ಸಾವಿರ ಪಾಸ್‌ಪೋರ್ಟ್‌ಗಳನ್ನು ನೀಡಲಾಗಿದೆ ಎಂದು ಸಚಿವರು ಉತ್ತರಿಸಿದ್ದಾರೆಂದು ಸಂಸದ ಈರಣ್ಣ ಕಡಾಡಿ ತಿಳಿಸಿದ್ದಾರೆ.

# ಅಕ್ಷರ ಕಲಿಸಿದ ಗುರು ಸರ್ವಕಾಲಿಕ ಶ್ರೇಷ್ಠರಾಗಿರುತ್ತಾರೆ: ಸಾಹಿತಿ ಪ್ರೊ. ಗುಜಗೊಂಡ



**ಮೂಡಲಗಿ :** 'ಅಕ್ಷರ ಜ್ಞಾನವನ್ನು ಕೊಟ್ಟು ವ್ಯಕ್ತಿತ್ವವನ್ನುರೂಪಿಸುವ ಗುರು ಸರ್ವಶ್ರೇಷ್ಠರೆನಿಸುತ್ತಾರೆ' ಎಂದು ಸಾಹಿತಿ ಪ್ರೊ. ಸಂಗಮೇಶ ಗುಜಗೊಂಡ ಹೇಳಿದರು.

ಇಲ್ಲಿಯ ಕೆ.ಎಚ್. ಸೋನವಾಲಕರ ಕಲ್ಯಾಣ ಮಂಟಪದಲ್ಲಿ ಆಯೋಜಿಸಿದ ಮೂಡಲಗಿಯ ಶ್ರೀ ಶಿವಬೋಧರಂಗ ಪ್ರೌಢ ಶಾಲೆಯಲ್ಲಿ 1982–83ನೇ ಸಾಲಿನಲ್ಲಿ ಎಸ್‌ಎಸ್‌ಎಲ್‌ಸಿ ಕಲಿತ ವಿದ್ಯಾರ್ಥಿಗಳ ಗುರುವಂದನಾ ಹಾಗೂ ಸ್ನೇಹ ಸಮ್ಮಿಲನ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು,

ಶಿಷ್ಯ ಪರಂಪರೆಯು ಭಾರತದಲ್ಲಿ ಪ್ರಾಚೀನ ಕಾಲದಿಂದ ಇಂದಿಗೂ ತನ್ನ ಪಾವಿತ್ರ್ಯತೆಯನ್ನು ಉಳಿಸಿಕೊಂಡಿದೆ ಎಂದರು.

ತಂದೆ, ತಾಯಿಜನ್ಮ ನೀಡಿದರೆಗುರುಅಕ್ಷರ ಕಲಿಸಿಜೀವನವನ್ನು ನಿರ್ವಹಿಸುವುದನ್ನು ಕಲಿಸಿ ಮೋಕ್ಷದದಾರಿಯನ್ನು ತೋರಿಸುವುದರಿಂದಗುರು ಸದಾ ಸ್ಮರಣೀಯರಾಗಿರುತ್ತಾರೆ. ಒಬ್ಬ ಶಿಷ್ಯ ಸಾಧನೆಯ ಶಿಖರ ಏರ ಬೇಕಾದರೆ ಗುರುವಿನ ಅನುಗ್ರಹ ಬೇಕಾಗುತ್ತದೆ.ಅದಕ್ಕೆ ಹೇಳುವರು ಗುರುವಿನ ಗುಲಾಮನಾಗುವ ತನಕದೊರೆಯದು ಮುಕತಿ ಎನ್ನುವ ಮಾತು ಸರ್ವಕಾಲಿಕ ಸತ್ಯವಾಗಿದೆ ಎಂದರು.

ನಿವೃತ್ತ ಹಿರಿಯ ಶಿಕ್ಷಕ ಎ.ಎಲ್ ಶಿಂಧಿಹಟ್ಟಿ ಮಾತನಾಡಿ '40 ವರ್ಷಗಳ ಹಿಂದೆಕಲಿತ ವಿದ್ಯಾರ್ಥಿಗಳು ನಿಮ್ಮ ಭವಿಷ್ಯವನ್ನು ರೂಪಿಸಿಕೊಂಡು ಗುರುಗಳನ್ನು ಗೌರವಿಸುವ ನಿಮ್ಮಕಾರ್ಯವು ಶ್ಲಾಘನೀಯವಾಗಿದೆಎಂದರು.

ನಿವೃತ್ತ ಶಿಕ್ಷಕರಾದ ವಿ.ಎಸ್. ಹಂಚಿನಾಳ, ಬಿ.ವೈ.ಶಿವಾಪುರ,ಅತಿಥಿ ಬಾಲಶೇಖರ ಬಂದಿ ಮಾತನಾಡಿದರು.

ನಿವೃತ್ತ ಶಿಕ್ಷಕರಾದ ಡಿ.ಎಂ.ಗಾಡವಿ, ಆರ್.ಟಿ.ಲಂಕೆಪ್ಪನ್ನವರ, ಎಂ.ಐ. ಶೆಟ್ಟರ, ಸಿ.ಐ. ಶೆಟ್ಟರ ವೇದಿಕೆಯಲ್ಲಿದ್ದರು.

ಸಮಾರಂಭದ ಪ್ರಾರಂಭದಲ್ಲಿ 40 ವರ್ಷಗಳ ಹಿಂದೆತಮಗೆಅಕ್ಷರ ವಿದ್ಯೆ ನೀಡಿದ ಗುರುಗಳಿಎ ಆರತಿ ಮಾಡಿತಿಲಕವಿಟ್ಟು ನಂತರ ಪುಷ್ಪವೃಷ್ಟಿ ಮಾಡುವ ಮೂಲಕ ವೇದಿಕೆಗೆ ಬರಮಾಡಿಕೊಂಡುಅವರ ಪಾದಮುಟ್ಟಿ ನಮಸ್ಕರಿಸಿ ಗೌರವ ಅರ್ಪಿಸಿದರು.ಶಿಷ್ಯ ವೃಂದದವರೆಲ್ಲ ಸೇರಿ ಗುರುಗಳಿಗೆ ಸನ್ಮಾವನ್ನು ನೆರವೇರಿಸಿ ಧನ್ಯತೆಯನ್ನು ಮೆರೆದರು.

ವಿದ್ಯಾರ್ಥಿಗಳ ಪರವಾಗಿ ಸುಭಾಸ ನಾಯಿಕ, ಯಾಕೂಬ ಸಣ್ಣಕ್ಕಿ, ರಮೇಶ ಬಂಗೆನ್ನವರ, ಸುರೇಖಾ ಬಸ್ತವಾಡ, ಅರ್ಜುನ ನಾಯಿಕವಾಡಿ, ಶ್ರೀರಂಗ ಇತಾಪೆ ಅವರು ತಮ್ಮ ವಿದ್ಯಾರ್ಥಿಗಳ ಅನುಭವ ಹಾಗೂ ಗುರುಗಳು ನೀಡಿದ ಮಾರ್ಗದರ್ಶನದ ಬಗ್ಗೆ ಮಾತನಾಡಿದರು.

ರಾಜೇಂದ್ರ ಜರಾಳೆ, ಚನ್ನಬಸು ಹಂಜಿ ಪ್ರಾಸ್ತಾವಿಕ ಮಾತನಾಡಿದರು.

ಮೋಹನಪತ್ತಾರ,ಬಸವರಾಜರಂಗಾಪುರ, ಪ್ರದೀಪ ಲಂಕೆಪ್ಪನವರ, ಪ್ರಕಾಶ ನಿಡಗುಂದಿ, ಮಲ್ಲಪ್ಪ ಮುರಗೋಡ, ಮಹಾದೇವ ಜೋಲಾಪುರೆ, ಮಹಾದೇವಿ ಹಿರೇಮಠ, ದಾನಮ್ಮ ಹಲಸಿ, ಸುವರ್ಣಅಂಗಡಿ, ಶಿವಲೀಲಾ ಕೊಟಗಿ, ಸೇವಂತಿ ಮೆಳವಂಕಿ ಸೇರಿದಂತೆಒಟ್ಟು 78 ಹಳೆಯ ವಿದ್ಯಾರ್ಥಿಗಳ ಸಂಗಮವಾಗಿತ್ತು.

ಲಲಿತಾ ಪತ್ತಾರ, ಸುರೇಖಾ ಬಸ್ತವಾಡ ಪ್ರಾರ್ಥಿಸಿದರು. ಗಂಗಾಧರ ಬಿಜಗುಪ್ಪಿ ನಿರೂಪಿಸಿದರು, ಯಲಗೌಡ ಪಾಟೀಲ ವಂದಿಸಿದರು.

# ಬುದ್ಧ ಬಸವ ಅಂಬೇಡ್ಕರರಂತೆ ಜ್ಞಾನಿಗಳಾಗಬೇಕು: ಟಿ.ಎಸ್. ಒಂಟಗೋಡಿ





**ಮೂಡಲಗಿ :** ಭಾರತೀಯ ಸಂಸ್ಕೃತಿಯ ರೂವಾರಿಗಳಾದ ಬುದ್ಧ ಬಸವ ಅಂಬೇಡ್ಕರರಂತೆ ಜ್ಞಾನಿಗಳಾಗುವ ಹಾಗೇ ವಿದ್ಯಾರ್ಥಿಗಳಲ್ಲಿ ಪೇರಪಣೆ ನೀಡುವುದು ಇಂದಿನ ಶಿಕ್ಷಣದ ತತ್ವ ಆಗಬೇಕು ವಿದ್ಯಾರ್ಥಿ ಗುರುವಿನ ಮಾರ್ಗದಲ್ಲಿ ನಡೆಯಬೇಕು ವಿದ್ಯಾರ್ಥಿಗಳು ದೂರದೃಷ್ಟಿಯ ತತ್ವ ಹೊಂದಿ ಅಧ್ಯಯನಕ್ಕೆ ಆದ್ಯತೆ ನೀಡಿ ಇಂದಿನ ಯುಗದ ಜಗತ್ತನ್ನು ಎದುರಿಸಿಜೀವನರೂಪಿಸಿಕೊಳ್ಳಲು ಪ್ರಯತ್ನಿಸಬೇಕೆಂದು ರಾಯಬಾಗ ತಾಲೂಕಾಕನ್ನಡಸಾಹಿತ್ಯಪರಿಷತ್ತಿನ ಗೌರವಕಾರ್ಯದರ್ಶಿಗಳಾದ ಟಿ. ಎಸ್. ಒಂಟಗೋಡಿ ಹೇಳಿದರು.

ಪಟ್ಟಣದ ಆರ್.ಡಿ.ಎಸ್ ಪಿ ಯು ಕಾಲೇಜಿನಲ್ಲಿಇಂದುಸನ್ 2024–25ನೇ ಶೈಕ್ಷಣಿಕ ಸಾಲಿನ ಪ್ರಥಮ ಪಿಯುಸಿ ವಿದ್ಯಾರ್ಥಿಗಳ ಸ್ವಾಗತ, ಕ್ರೀಡೆ, ಸಾಂಸ್ಕೃತಿಕ ಚಟುವಟಿಕೆ ಹಾಗೂ ಎನ್‌ಎಸ್‌ಎಸ್, ಸ್ಕೌಟ್ಸ್, ರೆಡ್ ಕ್ರಾಸ್ ಘಟಕಗಳ ಉದ್ಘಾಟನಾ ಸಮಾರಂಭ ಹಾಗೂ ವಿದ್ಯಾರ್ಥಿ ಪ್ರತಿನಿಧಿಗಳಿಗೆ ಪ್ರತಿಜ್ಞಾ ವಿಧಿ ಬೋಧನೆ ಕಾರ್ಯಕ್ರಮದಲ್ಲಿ ಮಾತನಾಡಿದರು.

ಕಾರ್ಯಕ್ರಮದ ಉದ್ಘಾಟನೆ ಯನ್ನು ನಡೆಸಿ ಸಾನಿಧ್ಯವನ್ನು ವಹಿಸಿದ ನಾಗನೂರ ಗ್ರಾಮದ ಮಾತೋಶ್ರೀ ಕಾವ್ಯಶ್ರೀ ಅಮ್ಮನವರು ಮಾತನಾಡಿ ವಿದ್ಯಾರ್ಥಿಗಳು ಮೊಬೈಲ್ ಮೋಹದಲ್ಲಿ ಮತ್ತು ಮೋಜು ಮಸ್ತಿ ರೂಪದಲ್ಲಿ ನಿಜವಾದ ಬದುಕನ್ನು ಕಂಡುಕೊಳ್ಳುವಲ್ಲಿ ವಿಫಲರಾಗಿದ್ದು ಸರಿಯಾದ ಗುರುವಿನ ಮಾರ್ಗದಲ್ಲಿ ನಡೆದರೆ ಅಂದುಕೊಂಡು ಗುರಿಯ ಜೊತೆಗೆ ನಿಜವಾದ ಬದುಕನ್ನು ರೂಪಿಸಿಕೊಳ್ಳುವಲ್ಲಿ ವಿದ್ಯಾರ್ಥಿಗಳು ಸಫಲರಾಗುತ್ತಾರೆ ಗುರು ಎಂಬ ಪದ ಕೇವಲ ಪದವಲ್ಲ ಅದೊಂದು ಶಕ್ತಿ ಆ ಶಕ್ತಿ ಜ್ಞಾನದ ರೂಪದಲ್ಲಿ ನಮಗೆ ಸಿಕ್ಕಾಗ ಅದು ಬದುಕನ್ನು ಸನ್ಮಾರ್ಗಕ್ಕೆ ಒಯ್ಯತ್ತದೆ ಎಂದರು.

ಅಧ್ಯಕ್ಷತೆಯನ್ನು ಆರ್.ಡಿ.ಎಸ್. ಸಮೂಹ ಸಂಸ್ಥೆಗಳ ಅಧ್ಯಕ್ಷ ಸಂತೋಷ ಪಾರ್ಶಿ ವಹಿಸಿಕೊಂಡು ಮಾತನಾಡಿದರು ಕಾರ್ಯಕ್ರಮದಲ್ಲಿ ಮುನ್ಯಾಳ ಗ್ರಾಮ ಪಂಚಾಯತ ಸದಸ್ಯ ರಮೇಶ ಪಾಟೀಲ ಮೂಡಲಗಿ ಕಾಶೀಮಅಲಿ ಬ್ಯಾಂಕಿನ ಅಧ್ಯಕ್ಷ ಅನ್ವರ ನದಾಫ ಕಾಲೇಜಿನ ಪ್ರಾಚಾರ್ಯ ಎಸ್.ಸಿ.ಸತ್ತಿಗೇರಿ ಉಪನ್ಯಾಸಕ ಎಸ್.ಎನ್. ಕುಂಬಾರ, ಎಸ್.ಡಿ.ವಾಲಿ, ಎಚ್.ಬಿ. ಚಿಕ್ಕೋಡಿ ಎಂ.ಆಯ್. ಜಾಡರ ಆರ್. ಜೆ. ಕಟಗೇರಿ ವಾಣಿಶ್ರೀ ಕಾಪಶೆ ಎಂ.ಎಲ್. ಪೂಜೇರಿ, ಎಸ್.ಬಿ.ಬೆಳವಿ ಮಾಳಪ್ಪ ಕೇದಾರಿ ಹಾಜರಿದ್ದರು. ಉಪನ್ಯಾಸಕ ಎಸ್.ಬಿ. ಲಟ್ಟಿ ಸ್ವಾಗತಿಸಿದರು. ಉಪನ್ಯಾಸಕ ಜಿ.ಎಸ್. ಮನ್ನಾಪೂರ ನಿರೂಪಿಸಿ ವಂದಿಸಿದರು.

# ಅಪಾಯ ಮಟ್ಟದಲ್ಲಿ ಹರಿಯುತ್ತಿರುವ ಕೃಷ್ಣಾ ನದಿ ನಡುಗಡ್ಡೆಯಾದ ರಬಕವಿ–ಬನಹಟ್ಟಿ ನಗರದ ಜಾಕವೆಲ್‌ಗಳು



**ರಬಕವಿ–ಬನಹಟ್ಟಿ :** ಮಹಾರಾಷ್ಟ್ರದ ಕೃಷ್ಣಾ ಜಲಾನಯನ ಪ್ರದೇಶಗಳಲ್ಲಿ ಭಾರೀ ಮಳೆಯಾಗುತ್ತಿದ್ದು, ಅಲ್ಲಿನ ವಿವಿಧ ಜಲಾಶಯಗಳಿಂದ ಭಾರೀ ಪ್ರಮಾಣದ ನೀರು ಹರಿದು ಬರುತ್ತಿರುವುದರಿಂದ ಸಮೀಪದ ಕೃಷ್ಣಾ ನದಿಯಲ್ಲಿ ದಿನದಿಂದ ದಿನಕ್ಕೆ ನೀರಿನ ಪ್ರಮಾಣ ಹೆಚ್ಚಾಗುತ್ತಿದ್ದು, ಶನಿವಾರ ಹಿಪ್ಪರಗಿ ಜಲಾಶಯಕ್ಕೆ 2,28,056 ಕ್ಯೂಸೆಕ್ ನೀರು ಹರಿದು ಬರುತ್ತಿದೆ.

ಅಪಾರ ಪ್ರಮಾಣದ ನೀರು ಹರಿದು ಬರುತ್ತಿರುವುದರಿಂದ ಅವಳಿ ರಬಕವಿ–ಬನಹಟ್ಟಿ ನಗರಗಳಿಗೆ ನೀರು ಪೂರೈಸುವ ಜಾಕವೆಲ್ಗಳಿಗೆ ಹೋಗುವ ಮಾರ್ಗ ಬಂದಾಗಿದೆ. ಸಧ್ಯ ಜಾಕವೆಲ್ಗಳು ಸಂಪೂರ್ಣವಾಗಿ ನಡುಗಡ್ಡೆಗಳಾಗಿವೆ.

ನೀರಿನ ಪ್ರಮಾಣ ಹೆಚ್ಚಾಗಿದ್ದರಿಂದ ಕೃಷ್ಣಾ ನದಿಯು ತನ್ನ ಒಡಲು ಬಿಟ್ಟು ಹೊರಗೆ ಹರಿಯುತ್ತಿದ್ದಾಳೆ. ಇದರಿಂದಾಗಿ ನದಿ ತೀರದ ಹಲವಾರು ಎಕರೆಯಷ್ಟು ಭೂ ಪ್ರದೇಶದಲ್ಲಿ ಬೆಳೆದ ಬೆಳೆಗಳು ನೀರಿನಲ್ಲಿ ನಿಂತಿವೆ. ಹಿಪ್ಪರಗಿ ಜಲಾಶಯದ ಹಿನ್ನೀರು ಕ್ರಮೇಣವಾಗಿ ಹೆಚ್ಚಾಗುತ್ತಿದೆ. ಇದರಿಂದಾಗಿ ನದಿ ತೀರದ ಹಲವಾರು ಎಕರೆಯಷ್ಟು ಭೂ ಪ್ರದೇಶದಲ್ಲಿ ಬೆಳೆದ ಬೆಳೆಗಳು ನೀರಿನಲ್ಲಿ ನಿಂತಿವೆ. ಹಿಪ್ಪರಗಿ ಜಲಾಶಯದ ಹಿನ್ನೀರು ಕ್ರಮೇಣವಾಗಿ ಹೆಚ್ಚಾಗುತ್ತಿದ್ದು, ಇದರಿಂದ ಜಾನುವಾರುಗಳನ್ನು ನದಿಯ ನೀರಿಗೆ ಇಳಿಸಬಾರದು ಎಂದು ತಾಲೂಕು ಆಡಳಿತ ಮುನ್ನಚ್ಚರಿಗೆ ನೀಡಿದೆ.

ಮಹಾರಾಷ್ಟ್ರದಲ್ಲಿಭಾರೀ ಮಳೆಯಾಗುತ್ತಿದ್ದು ಇದರಿಂದ ಮುಂದಿನ ದಿನಗಳಲ್ಲಿ ನದಿಗೆ ಇನ್ನೂ ಹೆಚ್ಚಿನ ನೀರು ಹರಿದು ಬರುವ ಸಾಧ್ಯತೆ ಇರುವುದರಿಂದ ನದಿ ತೀರದ ಗ್ರಾಮಗಳಲ್ಲಿ ಮುನ್ನೆಚ್ಚರಿಕೆಯ ಕ್ರಮವಾಗಿ ಡಂಗುರ ಸಾರಿ ಜನರು ನದಿ ತೀರಕ್ಕೆ ಸ್ನಾನಕ್ಕೆ , ಬಟ್ಟೆ ತೊಳೆಯಲಿಕ್ಕೆ , ದನ ಕರುಗಳನ್ನು ತೆಗೆದುಕೊಂಡು ಹೋಗಬಾರದು ಎಂದು ಎಚ್ಚರಿಕೆಯನ್ನು ನೀಡಲಾಗಿದೆ ಎಂದು ರಬಕವಿ–ಬನಹಟ್ಟಿ ತಹಸೀಲ್ದಾರ ಗಿರೀಶ ಸ್ವಾದಿ ತಿಳಿಸಿದ್ದಾರೆ.

ಶನಿವಾರ ಮುಂಜಾನೆ ಏಳು ಗಂಟೆಗೆ ದಾಖಲಾದಂತೆ ಹಿಪ್ಪರಗಿ ಜಲಾಶಯಕ್ಕೆ ಒಟ್ಟು 2,28,056 ಕೂಸೆಕ್ ನೀರು ಹರಿದು ಬರುತ್ತಿದೆ. ಇಂದಿನ ನೀರಿನ ಮಟ್ಟ 524.75 ಮೀಟರ್ ಇದ್ದು, ಜಲಾಶಯದ ಹೊರಹರಿವು 2,28,056 ಕ್ಯೂಸೆಕ್ ನಷ್ಟಿದೆ. ಮಹಾರಾಷ್ಟ್ರದ ಕೊಯ್ನಾ 93 ಮಿ. ಮೀ, ನವಜಾ 105 ಮಿ.ಮೀ., ಮಹಾಬಳೇಶ್ವರ 182 ಮಿ. ಮೀ, ತಾರಳಿ 162 ಮಿ. ಮೀ, ವಾರಣಾ 73 ಮಿ.ಮೀ., ರಾಧಾನಗರಿ 180 ಮಿ. ಮೀ, ದೂಧಗಂಗಾ 150 ಮಿ. ಮೀ ನಷ್ಟು ಮಳೆಯಾದ ವರದಿಯಾಗಿದೆ. ಕೃಷ್ಣಾನದಿ ಪಾತ್ರದ ಹಳಿಂಗಳಿ ಗ್ರಾಮದ ಮಹಾವೀರ ಪ್ರಾಥಮಿಕ ಶಾಲೆಯಲ್ಲಿ ಕಾಳಜಿ ಕೇಂದ್ರ ಆರಂಭಿಸಿದ್ದು,ನಾಲ್ಕುಕುಟುಂಬಗಳ 20 ಜನ ಸದಸ್ಯರಿಗೆ ಆಶ್ರಯ ಕಲ್ಪಿಸಲಾಗಿದೆ. ಆಲಮಟ್ಟಿ ಜಲಾಶಯದಲ್ಲಿನೀರಿನಒಳಹರಿವು2,18,230 ಕ್ಯೂಸೆಕ್ ಇದ್ದರೆ 2,96,794 ಕ್ಯೂಸೆಕ್ ನೀರನ್ನು ಹೊರಬಿಡಲಾಗುತ್ತಿದೆಯೆಂದು ಜಮಖಂಡಿಯ ಕಂದಾಯ ಉಪವಿಭಾಗಾಧಿಕಾರಿ ಶ್ವೇತಾ ಬೀಡಕರ ತಿಳಿಸಿದ್ದಾರೆ.

# ಮುಳಗಡೆ ತಮದಡ್ಡಿ ಗ್ರಾಮಸ್ಥರ ಆಕ್ರೋಶ

## ಪುನರ್ ವಸತಿ ಜಾಗ ನೀಡದಿದ್ದರೆ ಪ್ರಾಣ ಬಿಡಲು ಹೆದರುವುದಿಲ್ಲ–ಗ್ರಾಮಸ್ಥರು

## ಸಮಸ್ಯೆ ಇತ್ಯರ್ಥಕ್ಕೆ ಕಾಲಾವಕಾಶ ನೀಡಿ–ತಹಸೀಲ್ದಾರ್



**ತೇರದಾಳ :** ಹಿಪ್ಪರಗಿ ಆಣೆಕಟ್ಟಿನ ಹಿನ್ನಿರಿನಿಂದ ಬಾಧಿತಗೊಳ್ಳುವ ತಮದಡ್ಡಿ ಗ್ರಾಮ ಮುಳಗಡೆ ಗ್ರಾಮ ಎಂದು ಘೋಷನೆಗೊಂಡು ಹತ್ತಾರು ವರ್ಷ ಗತಿಸಿದೆ. ಮನೆಗಳಿಗೆ ಪರಿಹಾರ ನೀಡಿ ದಶಕ ಆಗಿದೆ. ಆದರೆ ಇದುವರೆಗೆ ನಮಗೆ ಪುನರ್ ವಸತಿ ಜಾಗ ನೀಡಿಲ್ಲ. ತಮದಡ್ಡಿ ಗ್ರಾಮಕ್ಕೆ ಪುನರ್ ವಸತಿ ಜಾಗ ನೀಡದಿದ್ದರೆ ಎಂತಹ ಪ್ರವಾಹ ಬಂದರು ನಾವು ತಮದಡ್ಡಿ ಗ್ರಾಮ ಬಿಟ್ಟು ಬರುವುದಿಲ್ಲ. ಪ್ರಾಣ ಬಿಡಲು ಹೆದರುವುದಿಲ್ಲ ಎಂದು ತಮದಡ್ಡಿ ಗ್ರಾಮಸ್ಥರು ತಹಸೀಲ್ದಾರ್ ಮುಂದೆ ಆಕ್ರೋಶದಿಂದ ಹೇಳಿದರು.

ಕೃಷ್ಣಾ ನದಿಯಲ್ಲಿ ನೀರಿನ ಮಟ್ಟ ಹೆಚ್ಚಳಗೊಂಡ ಹಿನ್ನಲೆಯಲ್ಲಿ ತಮದಡ್ಡಿ ಶನಿವಾರ ತಮದಡ್ಡಿ ಗ್ರಾಮಕ್ಕೆ ಬೇಟಿ ನೀಡಿದ ತಹಸೀಲ್ದಾರ್ ಗಿರೀಶ ಸ್ವಾದಿ ಗ್ರಾಮಸ್ಥರೊಂದಿಗೆ ಚರ್ಚಿಸುವ ವೇಳೆ ಮಾತನಾಡಿದ ಮುಖಂಡರಾದ ನಂದೆಪ್ಪ ನಂದೆಪ್ಪನವರ, ಸುಕಮಾರಗೌಡ ಪಾಟೀಲ, ಸರಕಾರ ಸಂತ್ರಸ್ತರಿಗೆ ನೀಡಿದ ಸರಕಾರಿ 89 ಎಕರೆ ಜಾಗಕ್ಕೆ ಯಾರೋ ನ್ಯಾಯಾಲದಿಂದತಡೆಯಾಜ್ಞೆತಂದರುಸರಕಾರದಿಂದ ಇದುವರೆಗೆ ತಡೆಯಾಜ್ಞೆಯನ್ನು ತೆರವುಗೊಳಿಸಲು ಆಗಿಲ್ಲಎಂದರೆಹೇಗೆ? 2012ರಲ್ಲಿಮನೆಗಳಿಗೆಪರಿಹಾರ ನೀಡಿದ್ದೀರಿ. 2016ರಲ್ಲಿ ಜಾಗ ಮಂಜೂರು ಆಗಿದೆ. ನೀಡಿದ ಪರಿಹಾರ ಖಾಲಿ ಆದರು ಇನ್ನೂ ನಮಗೆ ಜಾಗ ನೀಡಿಲ್ಲ. ಹೀಗಾದರೆ ನಾವು ಬದುಕುವದಾದರು ಹೇಗೆ ಎಂದು ಅಸಮಾಧಾನ ವ್ಯಕ್ತಪಡಿಸಿದರು. ನೀವು ಜಾಗ ನೀಡಿ ನಿವೇಶನ ಹಂಚಿಕೆ ಮಾಡಿದರೆ ಪ್ರವಾಹ ಬಂದಾಗ ನೀವು ಅಧಿಕಾರಿಗಳು ಬರುವುದೆ ಬೇಡ. ನಾವೇ ನಮ್ಮ ಜಾಗಗಳಿಗೆ ಹೋಗುತ್ತೇವೆ. ಹರಿಜನ ಕೇರಿಯಲ್ಲಿ 17 ಕುಟುಂಬಗಳನ್ನು ಸರ್ವೆದಿಂದ ಕೈ ಬಿಡಲಾಗಿದೆ. ಪರಿಹಾರವೂ ನೀಡಿಲ್ಲ. ಆದ್ದರಿಂದ ಕೈ ಬಿಟ್ಟಿರುವ 17 ಕುಟುಂಬಗಳಿಗೂ ನಿವೇಶ ನೀಡಬೇಕೆಂದು ಒತ್ತಾಯಿಸಿದರು. ಸಂತ್ರಸ್ತರ ಸಮಸ್ಯೆ ಆಲಿಸಿದ ತಹಸೀಲ್ದಾರ್ ಗಿರೀಶ ಸ್ವಾದಿ, ತಮದಡ್ಡಿ ಗ್ರಾಮಸ್ಥರಿಗೆ ಸರಕಾರ ನೀಡಿದ ಜಾಗವನ್ನು ನ್ಯಾಯಾಲದಿಂದ ಆದೇಶ ಮಾಡಿಸಿಕೊಂಡು ಬರಲು ಸ್ವಲ್ಪ ಕಾಲಾವಕಾಶ ನೀಡಿ. ನಿಮಗೆ ಪ್ರಾಮಾಣಿಕವಾಗಿ ನ್ಯಾಯ ಒದಗಿಸಿಕೊಡುವುದಾಗಿ ಭರವಸೆ ನೀಡಿದರು.

ಕೊಣ್ಣೂರ ಬೇಟಿ–ಕಾಂಗ್ರೆಸ್ ಮುಖಂಡ ಸಿದ್ದು ಕೊಣ್ಣೂರ ಕೂಡ ತಮದಡ್ಡಿ ಗ್ರಾಮಕ್ಕೆ ಬೇಟಿ ನೀಡಿ ಪ್ರವಾಹದ ಕುರಿತು ಅಧಿಕಾರಿಗಳಿಂದ ಮಾಹಿತಿ ಪಡೆದುಕೊಂಡರು.ಪೊಲೀಸ್,ಹೆಸ್ಕಾಂಅಧಿಕಾರಿಗಳು ಗ್ರಾಮದಲ್ಲಿಯೇ ಇರಿ. ಜಾಕವೆಲ್ ರಸ್ತೆಗೆ ಹಾಗೂ ಪ್ರವಾಹ ಬರುವ ಮನೆಗಳ ದಾರಿಗೆ ಬ್ಯಾರಿಕೇಡ್ ಅಳವಡಿಸುವಂತೆ ತಹಸೀಲ್ದಾರ್ ಅವರಿಗೆ ಹೇಳಿದರು. ಕಂದಾಯ ನಿರೀಕ್ಷಕ ಪಿ.ಆರ್. ಮಠಪತಿ, ನೋಡಲ್ ಅಧಿಕಾರಿ ಆನಂದ ಕೆಸರಗೊಪ್ಪ, ಪಿಎಸ್‌ಐ ಅಪ್ಪಣ್ಣ ಐಗಳಿ, ಪೂಜಾರಿ, ಹೆಸ್ಕಾಂ ಶಾಖಾಧಿಕಾರಿ ಬಿರಾದಾರ ಹಾಗೂ ಗ್ರಾಮದ ಮುಖಂಡರು ಇದ್ದರು.

## ಕೃಷ್ಣಾ ನದಿಯಲ್ಲಿ ಹೆಚ್ಚಿದ ನೀರು:

# ಆತಂಕದಲ್ಲಿ ಅಸ್ಕಿ ಗ್ರಾಮಸ್ಥರು





**ರಬಕವಿ–ಬನಹಟ್ಟಿ :** ಕೃಷ್ಣಾ ನದಿಯಲ್ಲಿ ನೀರಿನ ಪ್ರವಾಹ ಹೆಚ್ಚಳದಿಂದಾಗಿ ಸಮೀಪದ ಅಸ್ಕಿ ಗ್ರಾಮಸ್ಥರು ಆತಂಕದ ಛಾಯೆಯಲ್ಲಿದ್ದಾರೆ. ಮುಂದಿನ ದಿನಗಳಲ್ಲಿ ಕೃಷ್ಣಾ ನದಿಯಲ್ಲಿ ಇನ್ನಷ್ಟು ನೀರು ಹೆಚ್ಚಾದರೆ ಅಸ್ಕಿ ಗ್ರಾಮ ನಡುಗಡ್ಡೆಯಾಗಲಿದೆ.

ಇದರಿಂದಾಗಿ ಇಲ್ಲಿಯ ಜನರನ್ನು ಸಮೀಪದ ಆಸಂಗಿ ಗ್ರಾಮದ ಸರ್ಕಾರಿ ಶಾಲೆಗೆ ಸ್ಥಳಾಂತರ ಮಾಡಲಾಗುತ್ತಿದೆ.

ಗ್ರಾಮದಲ್ಲಿ ಅಂದಾಜು 415 ಕ್ಕೂ ಹೆಚ್ಚು ಕುಟುಂಬಗಳ ಮೂರು ಸಾವಿರಕ್ಕೂ ಹೆಚ್ಚು ಜನರು, 485 ಕ್ಕೂ ಹೆಚ್ಚು ಜಾನುವಾರುಗಳಿವೆ. ಗ್ರಾಮದ ಒಟ್ಟು 327 ಹೆಕ್ಟೇರ್ ಕೃಷಿ ಭೂಮಿಗೆ ತೊಂದರೆಯಾಗಲಿದೆ. ಒಂದು ಪ್ರಾಥಮಿಕ ಶಾಲೆ ಮತ್ತು ಎರಡುಅಂಗನವಾಡಿಕೇಂದ್ರಗಳಿಗೆ ತೊಂದರೆಯಾಗಲಿದೆ.

ನದಿತೀರದಜನರಿಗೆಮುಂಜಾಗ್ರತಾ ಕ್ರಮವಾಗಿ ನದಿಯಲ್ಲಿ ನೀರಿನ ಪ್ರಮಾಣ ಹೆಚ್ಚಾಗುತ್ತಿರುವುದರ ಬಗ್ಗೆ ತಿಳಿಸಲಾಗುತ್ತಿದೆ ಎಂದು ಸ್ಥಳದಲ್ಲಿರುವನೋಡಲ್‌ಅಧಿಕಾರಿ ಭರತೇಶಪೋತದಾರತಿಳಿಸಿದರು. ಗ್ರಾಮ ಆಡಳಿತಾಧಿಕಾರಿ ಈರೇಶ ಗೋಕಾಕ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

ಮೊಸಳೆಯ ಭಯ: ನದಿ ತೀರದಲ್ಲಿ ಬೃಹದಾಕಾರದ ಮೊಸಳೆ ಕಂಡು ಬಂದಿದೆ ಎಂದು ಗ್ರಾಮಸ್ಥರು ಅಧಿಕಾರಿಗಳಿಗೆ ತಿಳಿಸಿದರು. ಈ ದಿಶೆಯಲ್ಲಿ ಕ್ರಮ ತೆಗೆದುಕೊಳ್ಳಲಾಗುವುದು ಎಂದು ಅಧಿಕಾರಿಗಳು ತಿಳಿಸಿದರು.

ಅಸ್ಕಿ ಗ್ರಾಮದ ಜನರು ತಾವು ಗುಡ್ಡೆ ಹಾಕಿದ ಕೊಟ್ಟಿಗೆ ಗೊಬ್ಬರವನ್ನು ಬೇರೆ ಕಡೆಗೆ ಸ್ಥಳಾಂತರ ಮಾಡುತ್ತಿರುವುದು ಕಂಡು ಬಂದಿತು.

# ಟಿಪ್ಪು ಕ್ರಾಂತಿ ಸೇನೆಯಿಂದ ಅಹೋರಾತ್ರಿ ಧರಣಿ

**ವರದಿ: ಲಾಲಸಾಬ ಸವಾರಗೋಳ.**

**ಬಸವನ ಬಾಗೇವಾಡಿ :** ಶಹರದ ಬೀದಿ ಬದಿಯ ವ್ಯಾಪಾರಸ್ಥರಿಗೆ ಪರ್ಯಾಯ ವ್ಯವಸ್ಥೆ ಕಲ್ಪಿಸದೇ ಅವರನ್ನು ಒಕ್ಕಲೆಬ್ಬಿಸಿರುವುದನ್ನು ಖಂಡಿಸಿ ಟಿಪ್ಪು ಕ್ರಾಂತಿ ಸೇನೆಯಿಂದ ತಹಶೀಲ್ದಾರ ಕಾರ್ಯಾಲಯದ ಮುಂಭಾಗ ನಡೆಸಿರುವ ಅಹೋರಾತ್ರಿ ಧರಣಿ ಎರಡನೆಯ ದಿನಕ್ಕೆ ಕಾಲಿಟ್ಟಿದ್ದರೂ ಕೂಡ ಅಧಿಕಾರಿಗಳಿಗೆ ಧರಣಿ ನಿರತರ ಕೂಗು ಕೇಳುತ್ತಿಲ್ಲ ಎಂದು ಟಿಪ್ಪು ಕ್ರಾಂತಿ ಸೇನೆಯ ಉತ್ತರ ಕರ್ನಾಟಕ ಅಧ್ಯಕ್ಷ ಖಾಜಂಬರ ನದಾಫ ಆಕ್ರೋಶ ಹೊರ ಹಾಕಿದರು.

ಶನಿವಾರ ಮಾಧ್ಯಮದೊಂದಿಗೆ ಮಾತನಾಡಿದ ಅವರು ಕಳೆದ ನಾಲ್ವತ್ತು ವರ್ಷಗಳಿಂದ ಪಟ್ಟಣದಲ್ಲಿ ಬೀದಿ ಬದಿಯ ವ್ಯಾಪಾರಸ್ಥರು ವ್ಯಾಪಾರ ಮಾಡಿಕೊಂಡು ಉಪಜೀವನ ನಡೆಸುತ್ತಿದ್ದಾರೆ. ಮೆಗಾ ಮಾರುಕಟ್ಟೆಯ ನೆಪದಲ್ಲಿ ಸ್ಥಳಿಯ ಪುರಸಭೆಯ ಅಧಿಕಾರಿಗಳು ಬೀದಿ ಬದಿಯ ವ್ಯಾಪಾರಸ್ಥರ ಹೊಟ್ಟೆಯ ಮೇಲೆ ಬರೆ ಎಳೆದಿದ್ದಾರೆಂದು ಹರಿಹಾಯ್ದರು. ವಿಜಯಪುರ ನಗರದ ಲಾಲ್ ಬಹದ್ದೂರ ಶಾಸ್ತ್ರಿ ಮಾರುಕಟ್ಟೆಯ ಸುತ್ತಮುತ್ತಲೂ ಕೂಡ ಬೀದಿ ಬದಿಯ ವ್ಯಾಪಾರಸ್ಥರಿಗೆ ವ್ಯಾಪಾರ ಮಾಡಲು ಅವಕಾಶ ಕಲ್ಪಿಸಲಾಗಿದೆ. ಬಸವನ ಬಾಗೇವಾಡಿ ಪಟ್ಟಣದಲ್ಲಿ ಮಾತ್ರ ಬೀದಿ ಬದಿಯ ವ್ಯಾಪಾರಸ್ಥರನ್ನು ತೆರವುಗೊಳಿಸಿ ಅನ್ಯಾಯ ಮಾಡಲಾಗುತ್ತಿದೆ. ಈಗಾಗಿರುವ ಅನ್ಯಾಯ ಖಂಡಿಸಿ ಬೀದಿ ಬದಿಯ ವ್ಯಾಪಾರಸ್ಥರ ನೇತೃತ್ವದಲ್ಲಿ ಅಹೋರಾತ್ರಿ ಧರಣಿ ಹಮ್ಮಿಕೊಂಡಿದ್ದರೂ ಕೂಡ ಸಂಬಂಧಿಸಿದ ಅಧಿಕಾರಿಗಳು ಸೌಜನ್ಯಕ್ಕಾದರೂ ಧರಣಿ ನಿರತರನ್ನು ಭೇಟಿಯಾಗದಿರುವುದು ಖಂಡನೀಯವೆಂದರು.

ಅಧಿಕಾರಿಗಳು ಬೀದಿ ಬದಿಯ ವ್ಯಾಪಾರಿಗಳ ಅಳಲು ಆಲಿಸುವವರೆಗೆ ಧರಣಿ ಮುಂದುವರೆಸಲಾಗುವುದು ಎಂದು ಅವರು ಹೇಳಿದರು.

# ದೂಧಗಂಗಾ ನದಿಯ ಪ್ರವಾಹದಲ್ಲಿ ಬೆಳೆಗಳು!



**ನಿಪ್ಪಾಣಿ:** ಸಮೀಪದ ಕೊಗ್ನೋಳಿ ಸೇರಿದಂತೆ ಈ ಭಾಗದಲ್ಲಿ ಕಳೆದ ಎಂಟ್ಹತ್ತು ದಿನಗಳಿಂದ ಧಾರಾಕಾರ ಮಳೆ ಸುರಿಯುತ್ತಿದೆ. ಇದರಿಂದ ಜನಜೀವನ ಅಸ್ತವ್ಯಸ್ತಗೊಂಡಿದೆ. ಒಮ್ಮಿಂದೊಮ್ಮೆಲೇ ಬಂದಿರುವ ಪ್ರವಾಹದಿಂದಾಗಿ ರೈತರು ಕಂಗಾಲಾಗಿದ್ದಾರೆ.

ಸತತವಾಗಿ ಧಾರಾಕಾರ ಮಳೆ ಸುರಿಯುತ್ತಿರುವುದರಿಂದಾಗಿ ದೂಧಗಂಗಾ ನದಿ ನೀರು ಉಕ್ಕಿ ಹರಿಯುತ್ತಿದೆ. ಪ್ರವಾಹ ಪರಿಸ್ಥಿತಿ ಇನ್ನೂ ತೀವ್ರಗೊಳ್ಳುವ ಸಾಧ್ಯತೆ ಇದೆ. ಕೊಗ್ನೋಳಿ ಸೇರಿ ಹತ್ತಿರದ ಸುಳಗಾಂವ, ಹಂಚಿನಾಳ್ ಕೆ. ಎಸ್. ಸುಲ್ಲೂಡ್, ಕರ್ನೂರು, ವಂಡೂರು ಮೊದಲಾದ ಗ್ರಾಮಗಳಲ್ಲಿ ನದಿ ದಡದಲ್ಲಿರುವ ಕಬ್ಬು, ಸೋಯಾಬೀನ್, ಶೇಂಗಾ ಬೆಳೆಗಳು ಜಲಾವೃತವಾಗಿವೆ. ಇದರಿಂದ ರೈತ ವರ್ಗ ಸಂಕಷ್ಟಕ್ಕೆ ಸಿಲುಕಿದೆ. ಸತತ ಮಳೆಯಿಂದಾಗಿ ಕೃಷಿ ಚಟುವಟಿಕೆಗಳು ಸ್ಥಗಿತಗೊಂಡಿವೆ. ಇದರಿಂದ ಬೆಳೆಗಳ ಜತೆಗೆ ಕಳೆಗಳೂ ಸದೃಢವಾಗಿ ಬೆಳೆದಿವೆ.

ಮಳೆ ನಿಂತರೆ ಮಾತ್ರ ಅಂತರ ಬೆಳೆಯಾಗಿ ಕೃಷಿ ಕಾರ್ಯ ಚುರುಕುಗೊಳ್ಳುತ್ತದೆ. ಇದಲ್ಲದೇ ಸೂರ್ಯನ ಕಿರಣಗಳು ಬೆಳೆಗೆ ಬಾರದೇ ಇರುವುದರಿಂದ ರೈತರು ಮಳೆ ನಿಲ್ಲುವ ನಿರೀಕ್ಷೆಯಲ್ಲಿದ್ದಾರೆ.

# ಚಿತ್ರಕಲೆಗೆ ಧಾರವಾಡ ಕೊಡುಗೆ ಅಪಾರ



**ಧಾರವಾಡ :** ಚಿತ್ರಕಲೆಯಲ್ಲಿದೇಶಕ್ಕೆಬಹುದ ೊಡ್ಡಕೊಡುಗೆಕೊಟ್ಟಿದ್ದುಧಾರವಾಡ ನೆಲ. ಇದು ಹಲವು ಕಾಣಿಕೆಗಳನ್ನು ನೀಡಿದ ನಗರ.ಈ ನೆಲದಲ್ಲಿ ಹೋರಾಟದ ಕಿಚ್ಚು ಇದೆ.ಇಲ್ಲೊಂದು ಶಕ್ತಿ ಇದೆ.ಆಕಾರಣ-ಕ್ಕೆ ನಿರಂತರವಾಗಿ ಚಲನಶೀಲವಾಗಿರುತ್ತಿದೆಎಂದುಬೆಂಗಳೂರಿನ ಕರ್ನಾಟಕ ಲಲಿತ ಕಲಾ ಅಕಾಡೆಮಿಯಅಧ್ಯಕ್ಷ ಪ.ಸ. ಕುಮಾರ ಹೇಳಿದರು.

ಅವರುಕರ್ನಾಟಕ ವಿದ್ಯಾವರ್ಧಕ ಸಂಘದ135 ನೇ ಸಂಸ್ಥಾಪನಾ ದಿನಾಚರಣೆ ಕಾರ್ಯಕ್ರಮದಲ್ಲಿ ಸಂಘವು ನೂತನವಾಗಿ ನಿರ್ಮಿಸಿರುವ 'ಚಿತ್ರಕಲಾಗ್ಯಾಲರಿ' ಉದ್ಘಾಟಿಸಿ ಮಾತನಾಡಿದರು.

ಚಿತ್ರಕಲೆಗೆ ಪ್ರಾಮುಖ್ಯತೆಕೊಟ್ಟಕರ್ನಾಟಕ ವಿದ್ಯಾವರ್ಧಕ ಸಂಘದನಡೆ ಮಾದರೀಯ ನಡೆಯಾಗಿದೆ.ಸಾಂಪ್ರದಾಯಕಚಿತ್ರಕಲೆ ನಮ್ಮ ಕಲೆ.ಅದಕ್ಕೆ ಸಿಗಬೇಕಾದ ಸ್ಥಾನಮಾನ ಸಿಗುತ್ತಾ ಇಲ್ಲ. ಈ ಕುರಿತಂತೆಏನಾದರೂ ಮಾಡಿ ಸರಿಯಾದಸ್ಥಾನಮಾನನೀಡುವಕ ಾರ್ಯವನ್ನು ಮಾಡಲುಕರ್ನಾಟಕ ಲಲಿತ ಕಲಾ ಅಕಾಡೆಮಿಒಂದುಯೋಜನೆಯಾಗಿ ಕೈಗೆತ್ತಿಕೊಳ್ಳುತ್ತಿದೆ ಎಂದರು.

ಚಿತ್ರಕಲಾ ಪ್ರದರ್ಶನ ಉದ್ಘಾಟಿಸಿ ಮಾತನಾಡಿದ ಹಿರಿಯಕಲಾವಿದಎಂ. ಆರ್.ಬಾಳಿಕಾಯಿ, ಕಲಾವಿದ ಮತ್ತು ಕಲಾ ಗ್ಯಾಲರಿಕಲಾವಿದಬೆಳವಣಿಗೆಯದಾರಿಅದು. ಗ್ಯಾಲರಿ ಸಮಾಜದ ಆಗುಹೋಗುಗಳನ್ನು ಎತ್ತಿ ಹಿಡಿಯುತ್ತದೆ.ಹಿರಿಯರನ್ನು ನೆನಸಿಕೊಂಡಾಗ ಮಾತ್ರಒಬ್ಬ ಶ್ರೇಷ್ಟಕಲಾವಿದನಾಗಿ ರೂಪಗೊಳ್ಳಲು ಸಾಧ್ಯ. ಕಲಾವಿದನಾದವನುಎಲ್ಲರಸಭಾವನೆಗಳನ್ನು ಹೊಂದಿರಬೇಕು.ಅಂತರಾಷ್ಟ್ರೀಯ ಭಾಷೆಚಿತ್ರಕಲೆ. ತನ್ನಿಂದತಾನೆ ಮಾತಾಡುವ ಕಲೆ ಇದಾಗಿದೆ.ಕಲಾಕೃತಿಯನ್ನು ನೋಡುವವನುಒಳಗಣ್ಣಿನಿಂದ ಕಲೆಯನ್ನು ನೋಡಬೇಕು.ಆವಾಗಲೇ ಒಂದು ಕಲೆ ಅರ್ಥವಾಗಲು ಸಾಧ್ಯ.ಕಲೆಗೆ ವಯಸ್ಸಿನ ಹಂಗಿಲ್ಲ.ಒಬ್ಬಚಿತ್ರಕಲಾವಿದ ಬರೀ ಕಲೆ ಬಿಡಿಸಿದರೆ ನಡೆಯುವುದಿಲ್ಲ. ಅವನು ಸಾಹಿತ್ಯದ ಆರಾಧಕನಾಗಿರಬೇಕು, ವಿಶ್ಲೇಷಿಸುವ ಶಕ್ತಿ ಇರಬೇಕು ಎಂದರು.

ಮುಖ್ಯಅತಿಥಿಯಾಗಿಆಗಮಿಸಿದ್ದ ಗದಗ ವಿಜಯ ಕಲಾ ಕಾಲೇಜಿನ ಸಂಸ್ಥಾಪಕ ಅಶೋಕ ಅಕ್ಕಿ ಮಾತನಾಡಿ, ಲಲಿತ ಕಲೆಗಳಿಗೆ ಸಂಸ್ಕೃತಿಗೆ ಪ್ರೋತ್ಸಾಹದಕೊರತೆಇದೆ. ಅದು ನೀಗಬೇಕಿದೆ.ಪಿಯುಸಿ ಕಲಿಕೆಯಲ್ಲಿ ಕಲೆಗೆ ಸಂಬಂಧಿಸಿದಂತೆ ಪಠ್ಯವನ್ನು ಅಳವಡಿಸಬೇಕು. ಸಂಗೀತಕಲೆಯಲು ಅವಕಾಶ ಇರುವಂತೆ ಚಿತ್ರಕಲೆಯಕಲಿಕೆಗೂ ಅವಕಾಶ ಇರಬೇಕು.ಕಲಾ ಕ್ಷೇತ್ರ ಬೆಳೆಯಬೇಕೆಂದರೆ ಎಲ್ಲರೂ ಹಿರಿಯಕಲಾವಿದರು ಸೇರಿಆಲೋಚಿಸಬೇಕು. ಬರೀ ಸಮಸ್ಯೆಗಳನ್ನು ಹೇಳಿಕೊಳ್ಳದೇ ಕ್ರಿಯಾತ್ಮಕವಾಗಿ ಕೆಲಸ ಮಾಡಿ ಕಲಾ ಲೋಕ ಶ್ರೀಮಂತಗೊಳಿಸಬೇಕು ಎಂದರು

ಇನ್ನೋರ್ವ ಮುಖ್ಯಅತಿಥಿರೇಣುಕಾ ಮಾರ್ಕಂಡೆ ಮಾತನಾಡಿದರು

ಸಂಘದಅಧ್ಯಕ್ಷತೆಯನ್ನು ಕ.ವಿ.ವ.ಸಂಘದ ಅಧ್ಯಕ್ಷಚಂದ್ರಕಾಂತ ಬೆಲ್ಲದ ವಹಿಸಿದ್ದರು. ಎಫ್. ವಿ. ಚಿಕ್ಕಮಠ ಹಾಗೂ ಪ್ರೊ.ಬಸವರಾಜಕುರಿ ಅತಿಥಿಗಳನ್ನು ಪರಿಚಯಿಸಿದರು. ಸಂಘದ ಪ್ರಧಾನ ಕಾರ್ಯದರ್ಶಿಶಂಕರಹಲಗತ್ತಿಕಾರ್ಯಕ್ರಮ ನಿರೂಪಿಸಿದರು.ಪ್ರಾರಂಭದಲ್ಲಿ ಸಂಗೀತ ವಿದ್ಯಾರ್ಥಿನಿ ಕು.ಖುಷಿ ಧವಳಿ ಸಂಗೀತ ನಡೆಸಿಕೊಟ್ಟರು.ಅವರಿಗೆ ಅನೀಲ ಮೇತ್ರಿತಬಲಾ ಹಾಗೂ ಬಸವರಾಜ ಹೂಗಾರ ಹಾರ್ಮೋನಿಯಂ ಸಾಥ್ ನೀಡಿದರು.

# ಗುರುವಿಗೆ ದೊಡ್ಡ ಸ್ಥಾನವಿದೆ



**ಮುನವಳ್ಳಿ :** ಕಟಕೋಳದ ಎಸ್.ಜಿ.ಕೆ ಪ್ರೌಢ ಶಾಲೆಯ ಸನ್ 1989-1990ನೇ ಸಾಲಿನ ಎಸ್.ಎಸ್.ಎಲ್.ಸಿ ವಿದ್ಯಾರ್ಥಿಗಳಿಂದ ಗುರುವಂದನಾ ಹಾಗೂ ಸ್ನೇಹ ಸಮ್ಮೇಳನ ಕಾರ್ಯಕ್ರಮ ಎಸ್.ಜಿ.ಟಿ. ಪಿ.ಯು ಕಾಲೇಜಿನ ಸಭಾ ಭವನದಲ್ಲಿ ಜರುಗಿತು.

ಸಾನಿದ್ಯ ವಹಿಸಿ ಆಶೀರ್ವಚನ ನೀಡಿದ ವೀರಕ್ತಮಠದ ಶ್ರೀ ಸಚ್ಚಿದಾನಂದ ಶ್ರೀಗಳು ಭಾರತೀಯ ಪರಂಪರೆಯಲ್ಲಿ ಶಿಷ್ಯ ಮತ್ತು ಗುರುವಿಗೆ ಮಹತ್ತರ ಸಂಬಂಧವಿದೆ ವ್ಯಕ್ತಿಯು ಭಗವಂತನ ಕಡೆ ಹೋಗಲು ಆಧ್ಯಾತ್ಮಿಕ ಶಕ್ತಿ, ಧ್ಯಾನ, ದೀಕ್ಷೆ ಹಾಗೂ ಮಂತ್ರವನ್ನು ಹೇಳಿಕೊಟ್ಟು ಮಾರ್ಗದರ್ಶನ ಮಾಡುವುದು ಗುರುವಿನ ಕೆಲಸ. ಹಿಂದಿನಿಂದಲೂ ಗುರುವಿಗೆ ಅತ್ಯುನ್ನತ ಸ್ಥಾನ ನೀಡಲಾಗಿದ್ದು ಕಲಿಯುವವನಿಗೆ ಸತ್ಯದರ್ಶನ ಮಾಡಿಸುವ ಸನ್ಮಾರ್ಗವನ್ನು ತೋರಿಸುವ ಪೂಜ್ಯ ಸ್ಥಾನದಲ್ಲಿರುವ ವ್ಯಕ್ತಿಯೇ ಗುರು ಅವರ ಮಾರ್ಗದರ್ಶನದಲ್ಲಿ ನಡೆದು ನಮ್ಮ ಬಾಳನ್ನು ಹಸನ ಮಾಡಿಕೊಳ್ಳಬೇಕು. ಗುರುಕೃಪೆಗೆ ಪಾತ್ರವಾದರವರಿಗೆ ಜಗತ್ತಿನ ಯಾವ ಕೃಪೆಗು ಸಮಾನವಲ್ಲ ಜಗತ್ತಿನಲ್ಲಿ ಯಾವುದೆ ವಿಷಯವನ್ನು ಕಲಿಯಬೇಕಂದರೆ ಗುರುವಿನ ಸಾನಿಧ್ಯ ಬೇಕು ಎಂದರು.

ಎನ್.ಡಿ.ಪಾಟೀಲ ಆಗಮಿಸಿ ಮಕ್ಕಳಿಗೆ ಮೊದಲು ತಂದೆ ತಾಯಿ ಗುರು ನಂತರ ಅಕ್ಷರ ಕೊಡುವ ಶಿಕ್ಷಕ ಗುರು ಎಂದು ಉಪನ್ಯಾಸ ನೀಡಿದರು. ಪ್ರಾಸ್ತಾವಿಕವಾಗಿ ನವಿನ ನಲವಡೆ ಮಾತನಾಡಿದರು.

ಅಧ್ಯಕ್ಷತೆ ಮುಖ್ಯ ಶಿಕ್ಷಕ ಎಸ್.ಟಿ.ಹುಣಶಿಕಟ್ಟಿ, ಮುಖ್ಯ ಅತಿಥಿಗಳಾಗಿ ಸಂಘದ ಅಧ್ಯಕ್ಷ ಎ.ಸಿ.ಸುರಗ, ಉಪಾಧ್ಯಕ್ಷ ಎನ್.ಬಿ.ತೋಡಕರ, ಕಾರ್ಯದರ್ಶಿ ಸಿ.ಬಿ.ಕಳಸಪ್ಪನವರ, ಎಮ್.ಎಮ್.ಆತಾರ, ಟಿ.ಎನ್.ಮುರಂಕರ, ಶಿಕ್ಷಕರುಗಳಾದ ಬಿ.ಜಿ.ಕಡಬಿ, ಆರ್.ಎಸ್.ದೊಡವಾಡ, ಎಸ್.ಎ.ಮುಚ್ಚಂಡಿ, ಎ.ಎಚ್.ಬೊಂಗಾಳೆ, ಎಚ್.ಎಸ್.ಅಂಡಿ, ಶ್ರೀಮತಿ ಸಿ.ಬಿ.ಡಂಬಳ, ಶ್ರೀಮತಿ ಬ್ಯಾಳಿ, ಶ್ರೀಮತಿ ಅಡ್ನುನಗಿ, ಸಿ.ಬಿ.ಅಸೂಟಿ, ಯು.ಡಿ.ದಂಡಿನ, ಆರ.ಡಿ.ಗೊರವರ, ಬಿ.ಜಿ.ನಾಯಕ, ಟಿ.ಎಸ್.ಪಾಟಿಲ, ಬಿ.ಎಲ್.ಕಳಗೇರಿ, ಬಿ.ಆರ್.ದ್ಯಾಮನಗೌಡರ, ಎಸ್.ಎಮ್.ಸೂರಟಿ, ಎಂ.ಎಸ್.ಶೀಲವಂತಮಠ ಬೋಧಕೇತರ ಸಿಬ್ಬಂದಿ ಹಾಗೂ ಇತರರು ಉಪಸ್ಥಿತರಿರುವರು.

ಇದೆ ಸಂದರ್ಬದಲ್ಲಿ ಅಗಲಿದ ಶಿಕ್ಷಕರಿಗೆ ಶೃದ್ದಾಂಜಲಿ ಸಲ್ಲಿಸಿದರು

ಪ್ರಾಥಮಿಕ ಹಾಗೂ ಪ್ರೌಢಶಾಲೆಯ ನಿವೃತ್ತ ಶಿಕ್ಷಕರಿಗೆ ಗೌರವ ಸನ್ಮಾನ ಜರುಗಿತು. ವಿದ್ಯಾರ್ಥಿ ವಿದ್ಯಾರ್ಥಿನಿಯರು ತಮ್ಮ ಅನಿಸಿಕೆಗಳನ್ನು ವ್ಯಕ್ತಪಡಿಸಿದರು. ಸ್ವಾಗತ ಮಹಾದೇವ ಪಟ್ಟಣಶೆಟ್ಟಿ, ಕಾರ್ಯಕ್ರಮ ನಿರೂಪನೆ ಅನ್ನಪೂರ್ಣಾ ದೇವಾಂಗಮಠ, ವಂದನಾರ್ಪಣೆ ಮಹಾದೇವ ರಂಕನಕೊಪ್ಪ ನೆರವೇರಿಸಿದರು.

# ಉ.ಕ.ದಲ್ಲಿ ಮಳೆಯಬ್ಬರ: ಜನಜೀವನ ಅಸ್ತವ್ಯಸ್ತ



**ಹುಬ್ಬಳ್ಳಿ :** ಉತ್ತರ ಕರ್ನಾಟಕದ ಬೆಳಗಾವಿ, ಧಾರವಾಡ, ಹಾವೇರಿಯಲ್ಲಿ ಮಳೆಯಬ್ಬರ ಮುಂದುವರೆದಿದ್ದು, ಜನಜೀವನ ಅಸ್ತವ್ಯಸ್ತವಾಗಿದೆ.

ಪಶ್ಚಿಮಘಟ್ಟಪ್ರದೇಶಹಾಗೂಮಹಾರಾಷ್ಟ್ರದಲ್ಲಿ ಭಾರೀ ಮಳೆಯಾಗುತ್ತಿದ್ದು, ಕೃಷ್ಣಾ ನದಿ ನೀರಿನ ಮಟ್ಟ ಏರಿಕೆಯಾಗುತ್ತಿರುವುದರಿಂದ ನದಿ ಪಾತ್ರದ ಗ್ರಾಮದ ಜನರಿಗೆ ಆತಂಕ ಎದುರಾಗಿದೆ.

ದೂಧ್‌ಗಂಗಾ, ಘಟಪ್ರಭಾ, ಮಲಪ್ರಭಾ, ಮಾರ್ಕಾಂಡೇಯ ನದಿಗಳ ನೀರಿನ ಮಟ್ಟದಲ್ಲಿ ಏರಿಕೆಯಾಗಿದೆ. ಜಿಲ್ಲೆಯ ಚಿಕ್ಕೋಡಿ, ನಿಪ್ಪಾಣಿ, ಕಾಗವಾಡ, ರಾಯಬಾಗ, ಅಥಣಿ, ಕುಡಚಿ, ತಾಲೂಕಿನ ಕೆಲ ಗ್ರಾಮಗಳಲ್ಲಿ ಪ್ರವಾಹದ ಭೀತಿ ಎದುರಾಗಿದೆ.ಜಿಲ್ಲೆಯ ಹಲವು ಸೇತುವೆಗಳು ಮುಳುಗಡೆಯಾಗಿದ್ದು, ಜನರು ಸಂಚಾರಕ್ಕೆ ಪರದಾಡುವಂತಾಗಿದೆ.

ವ್ಯಾಪಕ ಮಳೆ ಹಿನ್ನೆಲೆಯಲ್ಲಿ ಬೆಳಗಾವಿ, ಬೈಲಹೊಂಗಲ, ಖಾನಾಪುರ, ಕಿತ್ತೂರು, ಚಿಕ್ಕೋಡಿ, ನಿಪ್ಪಾಣಿ ತಾಲ್ಲೂಕಿನ ಶಾಲೆಗಳಿಗೆ ರಜೆ ಘೋಷಿಸಿ ಜಿಲ್ಲಾಧಿಕಾರಿ ಮೊಹಮ್ಮದ್ ರೋಷನ್ ಆದೇಶಿಸಿದ್ದಾರೆ.

ಧಾರವಾಡ ಜಿಲ್ಲೆಯಾದ್ಯಂತ ಮಳೆ ಸು-ರಿಯುತ್ತಿದ್ದು, ನಿರಂತರ ಮಳೆಯಿಂದಾಗಿ ತಗ್ಗು ಪ್ರದೇಶದ ಮನೆಗಳಿಗೆ ನೀರು ಹರಿದು ಜನರು ಪರದಾಡುವ ಪರಿಸ್ಥಿತಿ ನಿರ್ಮಾಣವಾಗಿದೆ.

ಧಾರವಾಡ ಜಿಲ್ಲೆಯಾದ್ಯಂತ ನಿರಂತರ ಮಳೆ ಮತ್ತು ತಂಪು (ಶೀತ) ಗಾಳಿ ಬೀಸುತ್ತಿರುವುದರಿಂದ ಇಂದು ಮತ್ತು ನಾಳೆ ಜಿಲ್ಲೆಯ ಎಲ್ಲ ಅಂಗನವಾಡಿ, ಪೂರ್ವ ಪ್ರಾಥಮಿಕ, ಪ್ರಾಥಮಿಕ, ಪ್ರೌಢಶಾಲೆ ಮತ್ತು ಪದವಿಪೂರ್ವ ಕಾಲೇಜುಗಳಿಗೆ ರಜೆ ಘೋಷಿಸಿ, ಜಿಲ್ಲಾಧಿಕಾರಿ ದಿವ್ಯಪ್ರಭು ಆದೇಶಿಸಿದ್ದಾರೆ.

ಹಾವೇರಿ ಜಿಲ್ಲೆಯಾದ್ಯಂತ ಕಳೆದ ಹತ್ತು ದಿನಗಳಿಂದ ನಿರಂತರ ಸುರಿಯುತ್ತಿರುವ ಮಳೆಯಿಂದ ಜನರ ಜೀವನ ಅಸ್ತವ್ಯಸ್ತಗೊಂಡಿದೆ. ಜಿಲ್ಲೆಯಲ್ಲಿ ಹಲವು ಮನೆಗಳು ಕುಸಿದಿವೆ. ಜಿಲ್ಲೆಯ ಒಟ್ಟು 12 ಸೇತುವೆಗಳು ಮುಳುಗಡೆಯಾಗಿದ್ದು, ನದಿ ಪಾತ್ರದ ಜನರಿಗೆ ದೈನಂದಿನ ಕೆಲಸಕಾರ್ಯಗಳಿಗೆಅಡಚಣೆಉಂಟಾಗಿದೆ.

# ಪಾಲಿಕೆ ವಿರೋಧ ಪಕ್ಷದ ನಾಯಕರಾಗಿ ಕಮತಿ



**ಹುಬ್ಬಳ್ಳಿ :** ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆಯ ನೂತನ ವಿರೋಧ ಪಕ್ಷದ ನಾಯಕರಾಗಿ ರಾಜಶೇಖರ ಕಮತಿ ಅವರನ್ನು ನೇಮಕ ಮಾಡಲಾಗಿದೆ.

ವಾರ್ಡ್ ಸಂಖ್ಯೆ 4ರ ಸದಸ್ಯ ರಾಜಶೇಖರ ಕಮತಿ ಅವರನ್ನು ನೇಮಕ ಮಾಡಲಾಗಿದೆ ಎಂದು ಹು-ಧಾ ಮಹಾನಗರ ಜಿಲ್ಲಾ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಅಲ್ತಾಫ್ ಹಳ್ಳೂರ ತಿಳಿಸಿದ್ದಾರೆ.

ವಿರೋಧ ಪಕ್ಷದ ನಾಯಕರ ಆಯ್ಕೆಯಲ್ಲಿ ಈ ಬಾರಿ ಧಾರವಾಡ ಕ್ಷೇತ್ರಕ್ಕೆ ಆದ್ಯತೆ ನೀಡಲಾಗಿದೆ. ಈ ಹಿಂದೆ ವಿಪಕ್ಷ ನಾಯಕಿಯಾಗಿದ್ದ ಸುವರ್ಣ ಕಲ್ಲಕುಂಟ್ಲ ಅವಧಿ ಮುಗಿದ ಹಿನ್ನೆಲೆಯಲ್ಲಿ ನೂತನ ವಿರೋಧ ಪಕ್ಷದ ನಾಯಕನ ಆಯ್ಕೆ ಮಾಡಲಾಗಿದೆ.

# ಮುದ್ರಾ ಯೋಜನೆಯಡಿ ನೇಕಾರರಿಗೆ ಸಾಲ ಸೌಲಭ್ಯ

**ಬಾಗಲಕೋಟೆ :** ಪ್ರಸಕ್ತ ಸಾಲಿಗೆ ಪ್ರಧಾನಮಂತ್ರಿ ಮುದ್ರಾ ಯೋಜನೆಯಡಿ ಕೈಮಗ್ಗ ನೇಕಾರರಿಗೆ ದುಡಿಮೆ ಬಂಡವಾಳದ ರೂಪದಲ್ಲಿ ರಾಷ್ಟ್ರೀಕೃತ ಬ್ಯಾಂಕ್‌ಗಳಿಂದ ಸಾಲ ಒದಗಿಸಲು ಅರ್ಜಿ ಆಹ್ವಾನಿಸಲಾಗಿದೆ.

ಈ ಯೋಜನೆಯಡಿ ರಾಷ್ಟ್ರೀಕೃತ ಬ್ಯಾಂಕ್ ಮೂಲಕ ಶೇ.6ರ ಬಡ್ಡಿದರದಲ್ಲಿ ಸಾಲ ಒದಗಿಸಲಾಗುತ್ತದೆ. ಸಾಲದ ಮೊಬಲಗಿನ ಶೇ.20 ಗರಿಷ್ಠ 10 ಸಾವಿರ ರೂ.ಗಳ ಮಾರ್ಜಿನ ಮನಿ ಹಣವನ್ನು ಸಾಲ ವಿತರಿಸಿದ ಬ್ಯಾಂಕನ ಮೂಲಕ ಪಡೆಯಬಹುದಾಗಿದೆ. ಅರ್ಜಿಯನ್ನು ಉಪ ನಿರ್ದೇಶಕರು, ಕೈಮಗ್ಗ ಮತ್ತು ಜವಳಿ ಇಲಾಖೆ, ಕೊಠಡಿ ಸಂ.140/141, ಜಿಲ್ಲಾಡಳಿತ ಭವನ, ನವನಗರಮ ಬಾಗಲಕೋಟೆ ಇವರಿಂದ ಪಡೆದು ಭರ್ತಿ ಮಾಡಿದ ಅರ್ಜಿಯನ್ನು ಆಗಸ್ಟ 20 ರೊಳಗಾಗಿ ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗಾಗಿ ದೂಸಂ.08354-235463ಗೆ ಸಂಪರ್ಕಿಸುವಂತೆ ಕೈಮಗ್ಗ ಮತ್ತು ಜವಳಿ ಇಲಾಖೆಯ ಉಪನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಮಾಜಿ ಸೈನಿಕ ಮಕ್ಕಳಿಗೆ ಶಿಷ್ಯವೇತನ

**ಬಾಗಲಕೋಟೆ :** ಪ್ರಸಕ್ತ ಸಾಲಿಗಾರಿ 1 ನೇ ತರಗತಿಯಿಂದ ಅಂತಿಮ ಪದವಿ, ಡಿಪ್ಲೋಮಾವರಗೆ ಕರ್ನಾಟಕದಲ್ಲಿರುವ ಹಾಗೂ ಕರ್ನಾಟಕ ಸರಕಾರದಿಂದ ಮಾನ್ಯತೆ ಪಡೆದ ವಿದ್ಯಾಸಂಸ್ಥೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ಕರ್ನಾಟಕ ಮೂಲ ನಿವಾಸಿ ಮಿಲಿಟರಿ ಪಿಂಚಣಿದಾರ ಮಾಜಿ ಸೈನಿಕ ಮಕ್ಕಳಿಗೆ ಶಿಷ್ಯವೇತನಕ್ಕಾಗಿ ಅರ್ಜಿ ಆಹ್ವಾನಿಸಲಾಗಿದೆ. ಮಾನ್ಯತೆ ಪಡೆದ ಶಾಲಾ, ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ಮಿಲಿಟರಿ ಪಿಂಚಣಿ ರಹಿತ ರಾಜ್ಯದ ಮಾಜಿ ಸೈನಿಕರ ಹಾಗೂ ರಾಜ್ಯದಲ್ಲಿ ನೆಲೆಸಿರುವ ಹೊರ ರಾಜ್ಯದ ಮಾಜಿ ಸೈನಿಕರ ಮಕ್ಕಳಿಗೆ ಪ್ರಸಕ್ತ ಸಾಲಿನ ಶೈಕ್ಷಣಿಕ ವರ್ಷಕ್ಕಾಗಿ ಕಲ್ಯಾಣ ನಿಧಿಯಿಂದ 1 ನೇ ತರಗತಿಯಿಂದ ಪಿಯುಸಿ ದ್ವಿತೀಯ ವರೆಗೆ ಓದುವ ಮಕ್ಕಳಿಗೆ ಪುಸ್ತಕ ಅನುದಾನ ಮತ್ತು ಡಿಗ್ರಿ, ಡಿಪ್ಲೋಮಾ, ಜೆಓಸಿ, ಪ್ರೋಫೆಷನ ಕಾಲೇಜುಗಳಲ್ಲಿ ವ್ಯಾಸಂಗ ಮಾಡುವ ಮಕ್ಕಳಿಗೆ ವಿಶೇಷ ನಿಧಿಯಿಂದ ಶಿಷ್ಯವೇತನಕ್ಕಾಗಿ ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿ ಸಲ್ಲಿಸುವ ಕೊನೆ ದಿನ ಅಕ್ಟೋಬರ 31 ಆಗಿದ್ದು, ಅರ್ಜಿ ನಮೂನೆ ಹಾಗೂ ಹೆಚ್ಚಿನ ಮಾಹಿತಿಗಾಗಿ ಉಪ ನಿರ್ದೇಶಕರು, ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆ, ಸೆಕ್ಟರ ನಂ.22 ಪೊಲೀಸ್ ಪ್ಯಾಲೇಸ ಹತ್ತಿರ ನವನಗರ, ಬಾಗಲಕೋಟೆ ಕಾರ್ಯಾಲಯದಿಂದ ಪಡೆದುಕೊಳ್ಳಬಹುದಾಗಿದೆ ಎಂದು ಸೈನಿಕ ಕಲ್ಯಾಣ ಇಲಾಖೆ ಪ್ರಕಟಣೆಯಲ್ಲಿ ತಿಳಿಸಿದೆ.

# ಕ.ಸಾ.ಪ. ಅಧ್ಯಕ್ಷ ನಾಡೋಜ ಡಾ. ಮಹೇಶ್ ಜೋಶಿ ಅವರ ಸಹೋದರಿಯ ನಿಧನ



**ಬೆಂಗಳೂರು :** ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ನಾಡೋಜ ಡಾಕ್ಟರ್. ಮಹೇಶ್ ಜೋಶಿ ಅವರ ಹಿರಿಯ ಸಹೋದರಿ ಶ್ರೀಮತಿ. ರೇಣುಕಾ ಕುತ9ಕೋಟಿ ಅವರು ತಮ್ಮ 83 ನೆಯ ವಯಸ್ಸಿನಲ್ಲಿ ಜುಲೈ 26 ರಂದು ಬೆಂಗಳೂರಿನಲ್ಲಿ ವೈಕುಂಠವಾಸಿಯಾದರು. ಅವರು ತಮ್ಮ ಹಿಂದೆ ಪತಿ ಲಿಂಗರಾಜ ಕುತ9ಕೋಟಿ, ನಾಲ್ಕು ಜನ ಪುತ್ರಿಯರು, ಓರ್ವ ಪುತ್ರ, ಕ.ಸಾ.ಪ ಅಧ್ಯಕ್ಷರಾದ ಮಹೇಶ ಜೋಶಿ ಸೇರಿದಂತೆ ಮೂವರು ತಮ್ಮಂದಿರು, ಓರ್ವ ಸಹೋದರಿ ಹಾಗೂ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಅವರು ಕೆನರಾ ಬ್ಯಾಂಕಿನಲ್ಲಿ ವಲಯ ವ್ಯವಸ್ಥಾಪಕರಾಗಿ ಸೇವೆ ಸಲ್ಲಿಸಿ ನಿವೃತ್ತರಾಗಿದ್ದರು.

# ಬೆಳಗಾವಿಯಲ್ಲಿ ನಿರಂತರ ಮಳೆ

## ಶವ ಸಾಗಾಟಕ್ಕೆ ತೊಂದರೆ: ಬಾಣಂತಿಯರು, ಶಿಶುಗಳಿಗೂ ತಾಪತ್ರಯ



**ಬೆಳಗಾವಿ :** ಮಹಾನಗರದಲ್ಲಿ ಧಾರಾಕಾರವಾಗಿ ಮಳೆ ಸು-ರಿಯುತ್ತಿದ್ದು, ಹಲವು ಅವಾಂತರಗಳನ್ನು ಸೃಷ್ಟಿಸುತ್ತಿದೆ. ವರುಣಾರ್ಭಟದಿಂದ ಶವ ಸಾಗಾಟಕ್ಕೂ ಜನರು ತೊಂದ-ರೆ ಅನುಭವಿಸಿದ ಘಟನೆ ಗುರುವಾರ ನಡೆಯಿತು.

ಇಲ್ಲಿನ ಅಮನ್ ನಗರದ ಮೆಹಬೂಬಿ ಆದಂಸಾಹೇಬ ಮಕಾಂದಾರ್ (90) ಎಂಬವರು ಮನೆಯಲ್ಲಿ ಕಾಲು ಜಾರಿ ಬಿದ್ದು ಸಾವನ್ನಪ್ಪಿದ್ದರು. ಇವರ ಮೃತದೇಹವನ್ನು ಅಂತ್ಯಕ್ರಿಯೆಗೆ ಸಾಗಿಸಲು ಒಂದೆಡೆ ಸರಿಯಾದ ರಸ್ತೆ ಇಲ್ಲದೇ ಮತ್ತೊಂದೆಡೆ ನಿರಂತರವಾಗಿ ಸುರಿಯುತ್ತಿರುವ ಮಳೆಯಿಂದಾಗಿ ಕುಟುಂಬಸ್ಥರು ಪರದಾಡಿದರು. ಕೊನೆಗೆ, ಅಂಜುಮನ್ ಸಂಸ್ಥೆಯ ಸಹಾಯದಿಂದ ಮೊಣಕಾಲುದ್ದ ನಿಂತ ನೀರಿನಲ್ಲೇ ಮಹಿಳೆಯ ಮೃತದೇಹವನ್ನು ಕೊಂಡೊಯ್ದರು.

ಬಾಣಂತಿಯರ ಪರದಾಟ: ತಾಲೂಕಿನ ಪೀರನವಾಡಿಯ ಪಾಟೀಲ ಗಲ್ಲಿಯಲ್ಲಿ ಇಬ್ಬರು ಬಾಣಂತಿಯರು ವಾಸವಿದ್ದ ಮನೆಗೂ ಮಳೆ ನೀರು ನುಗ್ಗಿದೆ. ಎರಡು ದಿನಗಳಿಂದ ಮನೆಯಲ್ಲಿನ ನೀರು ಹೊರ ಹಾಕಲು ಕುಟುಂಬ ಸದಸ್ಯರು ಹರಸಾಹಸಪಟ್ಟರು. ಬಾಣಂ-ತಿಯರು ಹಾಗೂ ನವಜಾತ ಶಿಶುಗಳನ್ನು ಬಾಡಿಗೆ ಮನೆಗೆ ಸ್ಥಳಾಂತರಿಸಲಾಗಿದೆ. ನಾಗಲಿಂಗ ಹಿರೇಮಠ ಎಂಬವರ ಮನೆಗೆ ನೀರು ನುಗ್ಗಿ ಅವಾಂತರ ಸೃಷ್ಟಿಯಾಯಿತು. ಈ ಹಿಂದೆ ಇದೇ ಮನೆಯ ಗೋಡೆ ಕುಸಿದು ನಾಗಲಿಂಗ ಹಿರೇಮಠ ಅವರ ತಾಯಿ ಮೃತಪಟ್ಟಿದ್ದರು.

"ಇಬ್ಬರು ಬಾಣಂ-ತಿಯರು ಮನೆಯಲ್ಲಿದ್ದಾಗಲೇ ನೀರು ನುಗ್ಗಿತು. ಅಡುಗೆ ವಸ್ತುಗಳೆಲ್ಲವೂ ನೀರು ಪಾಲಾಗಿವೆ. ಹೋಟೆಲ್‌ನಿಂದ ಅನ್ನ, ಸಾಂಬಾರು ತಂದು ಊಟ ಮಾಡುತ್ತಿದ್ದೇವೆ. ಇಡೀ ದಿನ ನೀರು ಹೊರಗೆ ಹಾಕುವುದೇ ನಮ್ಮ ಕೆಲಸವಾಗಿದೆ" ಎಂದು ಸ್ಥಳೀಯ ನಿವಾಸಿ ಸರಸ್ವತಿ ಕುಲಕರ್ಣಿ ತಿಳಿಸಿದರು.

ಮೇಯರ್ ಭೇಟಿ: ಮಳೆಯಿಂದ ಅವಾಂತರ ಸೃಷ್ಟಿಯಾದ ನಗರದ ವಿವಿಧ ಬಡಾವಣೆಗಳಿಗೆ ಮೇಯರ್ ಸವಿತಾ ಕಾಂಬಳೆ, ಮಹಾನಗರ ಪಾಲಿಕೆ ಆಯುಕ್ತ ಅಶೋಕ ದುಡಗುಂಟಿ ಸೇರಿ ಮತ್ತಿತರ ಅಧಿಕಾರಿಗಳು ಭೇಟಿ, ನೀಡಿ ಪರಿಶೀಲನೆ ನಡೆಸಿದ್ದಾರೆ.

# ಕಟ್ಟಿಗೆ ಸ್ಟ್ರೇಚರ್ ಮೇಲೆ ಆಸ್ಪತ್ರೆಗೆ ಸಾಗಿಸಿದ್ದ ಮಹಿಳೆ ಸಾವು: ಫಲಿಸಲಿಲ್ಲ ಖಾನಾಪುರ ಕಾಡಂಚಿನ ಗ್ರಾಮಸ್ಥರ ಹೋರಾಟ

**ಬೆಳಗಾವಿ :** ಖಾನಾಪುರ ಕಾಡಂಚಿನ ಅಮಗಾಂವ ಗ್ರಾಮದಲ್ಲಿ ಕಟ್ಟಿಗೆ ಸ್ಟ್ರೇಚರ್‌ನಲ್ಲಿ ಐದು ಕಿ.ಮೀ. ಹೊತ್ತೊಯ್ದು ಆಂಬ್ಯುಲೆನ್ಸ್? ಮೂಲಕ ಆಸ್ಪತ್ರೆಗೆ ದಾಖಲಿಸಿದ್ದ ಮಹಿಳೆ ಚಿಕಿತ್ಸೆ ಫಲಕಾರಿಯಾಗದೇ ಗುರುವಾರ ಬೆಳಗಿನ ಜಾವ ಕೊನೆಯುಸಿರೆಳೆದಿದ್ದಾರೆ.

ಹೌದು, ಬೆಳಗಾವಿ ಕೆಎಲ್‌ಇ ಆಸ್ಪತ್ರೆಯಲ್ಲಿ ಚಿಕಿತ್ಸೆ ಫಲಿಸದೇ ಹರ್ಷದಾ ಘಾಡಿ (42) ಮೃತಪಟ್ಟಿದ್ದಾರೆ. ತೀವ್ರ ಜ್ವರದ ಹಿನ್ನೆಲೆಯಲ್ಲಿ ಜುಲೈ 18ರಂದು ಅವರನ್ನು ಆಸ್ಪತ್ರೆಗೆ ದಾಖಲಿಸಲು ಗ್ರಾಮಸ್ಥರು ಹರಸಾಹಸ ಪಟ್ಟಿದ್ದರು. ಕಟ್ಟಿಗೆಯಲ್ಲಿ ಸ್ಟ್ರೆಚರ್ ಮಾಡಿ ಐದು ಕಿಮೀ ಚಿಕಲೆವರೆಗೂ ಸುರಿಯುತ್ತಿದ್ದ ಭಾರಿ ಮಳೆಯಲ್ಲಿ ಹೊತ್ತುಕೊಂಡು ಬಂದಿದ್ದರು. ಮಹಿಳೆಯ ಪ್ರಾಣ ಉಳಿಸಲು ಕಸರತ್ತು ನಡೆಸಿದ್ದರು. ಆದರೆ, ಗ್ರಾಮಸ್ಥರ ಹೋರಾಟ ಕೊನೆಗೂ ಫಲಿಸಲಿಲ್ಲ. ಚಿಕಿತ್ಸೆಗೆ ಸ್ಪಂದಿಸದೇ ಹರ್ಷದಾ ಇಂದು ಸಾವನ್ನಪ್ಪಿದ್ದಾರೆ.

ಮಾತನಾಡಿದ ಮೃತ ಹರ್ಷದಾ ಪತಿ ಹರಿಶ್ಚಂದ್ರ ಘಾಡಿ, "18ರಂದು ಮಧ್ಯಾಹ್ನ 1 ಗಂಟೆಗೆ ನನ್ನ ಪತ್ನಿಯ ಬಿಪಿ ಲೋ ಆಗಿ ಕುಸಿದು ಬಿದ್ದರು. ಆಗ ಗ್ರಾಮಸ್ಥರು ಕೂಡಿ-ಕೊಂಡು ಕಷ್ಟಪಟ್ಟು ಸ್ಟ್ರೇಚರ್?ನಲ್ಲಿ ಚಿಕಲೆ ಗ್ರಾಮದವರೆಗೂ ಹೊತ್ತುಕೊಂಡು ಬಂದೆವು. ಆ ಬಳಿಕ ಆಂಬ್ಯುಲೆನ್ಸ್‌ನಲ್ಲಿ ಜಿಲ್ಲಾಸ್ಪತ್ರೆಗೆ ದಾಖಲಿಸಿದೆವು. ಅಲ್ಲಿ ಆಗದೇ, ಕೊನೆಗೆ ಕೆಎಲ್‌ಇ ಆಸ್ಪತ್ರೆಗೆ ಸೇರಿಸಿದೆವು. ಆದರೆ, ಇಂದು ಬೆಳಗ್ಗೆ 4 ಗಂಟೆ ಸುಮಾರಿಗೆ ಅವರು ಮೃತರಾಗಿದ್ದಾರೆ. ನಮ್ಮೂರಲ್ಲಿ ಬಹಳಷ್ಟು ಸಮಸ್ಯೆ ಇದೆ. ವಿದ್ಯುತ್, ರಸ್ತೆ, ಮೊಬೈಲ್ ನೆಟ್‌ವರ್ಕ್ ಕೂಡ ಇಲ್ಲ. ನಿತ್ಯ ಸಮಸ್ಯೆಯಲ್ಲೇ ಬದುಕುವ ಸ್ಥಿತಿ ಇದೆ" ಎಂದು ಅಳಲು ತೋಡಿಕೊಂಡರು.

ಮುಖ್ಯರಸ್ತೆಯಿಂದ 12 ಕಿಮೀ ಒಳಗೆ ದಟ್ಟ ಅರಣ್ಯ ಪ್ರದೇಶದಲ್ಲಿ ಅಮಗಾಂವ ಗ್ರಾಮವಿದೆ.

ಇಲ್ಲಿ 73 ಕುಟುಂಬಗಳು ಇದ್ದು, 560 ಜನಸಂಖ್ಯೆ ಇದೆ. ರೇಶನ್ ಬೇಕಾದರೆ ಕಾಡಿನಲ್ಲಿ ನಡೆದುಕೊಂಡು ಚಿಕಲೆ ಇಲ್ಲವೇ ಜಾಂಬೋಟಿಗೆ ಬರಬೇಕು. ಹೀಗೆ ಬಿಡದೇ ಮಳೆ ಸುರಿದರೆ ಮನೆ ಬಿಟ್ಟು ಹೊರಗೆ ಬಾರದ ಪರಿಸ್ಥಿತಿ. ಇನ್ನು ತುರ್ತು ಆರೋಗ್ಯ ಸಮಸ್ಯೆ ಉದ್ಭವಿಸಿದಾಗ ಆಸ್ಪತ್ರೆಗೆ ಸೇರಿಸಲು ಹರಸಾಹಸ ಪಡಬೇಕು.

ಅಮಗಾಂವ ಸರ್ಕಾರಿ ಶಾಲೆಯ ಕನ್ನಡ ಶಿಕ್ಷಕ ನಿಂಗಪ್ಪ ಬಾಳೇಕುಂದ್ರಿ ಮಾತನಾಡಿ, "ಐದಾರು ದಿನ ಚಿಕಿತ್ಸೆ ನೀಡಿದರೂ ಪಾಪ ಮಹಿಳೆ ಬದುಕಲಿಲ್ಲ. ಮೃತ ಮಹಿಳೆಗೆ ಇಬ್ಬರು ಸಣ್ಣ ಮಕ್ಕಳಿದ್ದಾರೆ. ಇದೇ ರೀತಿ ಈ ಊರಲ್ಲಿ ಸಾಕಷ್ಟು ಜನರು ಸೂಕ್ತ ಚಿಕಿತ್ಸೆ ಸಿಗದೇ ಸಾವನ್ನಪ್ಪಿದ್ದಾರೆ.

ಅಮಗಾಂವ ಗ್ರಾಮವು ಮೀಸಲು ಅರಣ್ಯ ಪ್ರದೇಶದಲ್ಲಿದೆ. ಸಂಚಾರಕ್ಕೆ ಸರಿಯಾದ ರಸ್ತೆ, ಸೇತುವೆ ಇಲ್ಲ. 28 ವರ್ಷಗಳಿಂದ ಅಮಗಾಂವ ಸರ್ಕಾರಿ ಶಾಲೆಯ ಶಿಕ್ಷಕನಾಗಿ ಕೆಲಸ ಮಾಡುತ್ತಿದ್ದೇನೆ. ಅಲ್ಲಿನ ಪರಿಸ್ಥಿತಿ ನೋಡಿ, ಮನೆ ಮಾಡಿಕೊಂಡು ನಾನು ಅಲ್ಲಿಯೇ ವಾಸವಿದ್ದೇನೆ" ಎಂದು ವಿವರಿಸಿದರು.

"ದಯಮಾಡಿ ಅಮಗಾಂವ ಊರನ್ನು ಬೇರೆ ಕಡೆ ಸ್ಥಳಾಂತರಿಸಿ ಅನುಕೂಲ ಮಾಡಿಕೊಡಿ. ಇಲ್ಲವಾದರೆ, ಸೇತುವೆ ಮತ್ತು ರಸ್ತೆ ಸೇರಿ ಇನ್ನಿತರ ಮೂಲಸೌಕರ್ಯಗಳನ್ನಾದ್ರೂ ಕಲ್ಪಿಸಿ, ಮುಂದೆ ಈ ರೀತಿ ಘಟನೆಗಳು ಮರುಕಳಿಸದಂತೆ ಸರ್ಕಾರ ಕ್ರಮ ಕೈಗೊಳ್ಳಬೇಕು" ಎಂದು ಮನವಿ ಮಾಡಿದರು.

# ಅತಿಥಿ ಉಪನ್ಯಾಸಕರ ನೇಮಕ

**ಬಾಗಲಕೋಟೆ :** ಪ್ರಸಕ್ತ ಸಾಲಿಗೆ ನವನಗರದ ಸೆಕ್ಟರ ನಂ.13 ರಲ್ಲಿರುವ ಅಲ್ಪಸಂಖ್ಯಾತರ ಮೌಲಾನಾ ಆಜಾದ ಮಾದರಿ ಕಾಲೇಜಿಗೆ ಅತಿಥಿ ಉಪನ್ಯಾಸಕರನ್ನು ನೇಮಕ ಮಾಡಿಕೊಳ್ಳಲು ಅರ್ಜಿ ಆಹ್ವಾನಿಸಲಾಗಿದೆ. ಭೌತಶಾಸ್ತ್ರ, ರಾಸಾಯನಶಾಸ್ತ್ರ, ಗಣಿತ, ಜೀವಶಾಸ್ತ್ರ, ಕನ್ನಡ, ಆಂಗ್ಲ ಹಾಗೂ ಉರ್ದು ವಿಷಯಗಳಲ್ಲಿ ತಲಾ ಒಂದು ಹುದ್ದೆಯನ್ನು ನೇಮಕ ಮಾಡಿಕೊಳ್ಳಲಾಗುತ್ತಿದೆ. ಅರ್ಜಿ ಸಲ್ಲಿಸುವ ಕೊನೆಯ ದಿನ ಆಗಸ್ಟ 2 ಆಗಿದೆ. ಅರ್ಜಿ ನಮೂನೆ ಹಾಗೂ ಹೆಚ್ಚಿನ ಮಾಹಿತಿಗಾಗಿ ಮೌಲಾನಾ ಆಜಾದ ಮಾದರಿ ಕಾಲೇಜಿನ ಪ್ರಾಚಾರ್ಯ ಲಕ್ಷ್ಮೀ ಮೆಳ್ಳಿಗೇರಿ (8867194602) ದೂಸಂ.08357-200044 ಇವರನ್ನು ಸಂಪರ್ಕಿಸುವಂತೆ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಸವದತ್ತಿ ಯಲ್ಲಮ್ಮದೇವಿ ಹುಂಡಿ ಎಣಿಕೆ: ಒಂದೂವರೆ ತಿಂಗಳಲ್ಲಿ ರೂ. 1.96 ಕೋಟಿ ಕಾಣಿಕೆ ಸಂಗ್ರಹ!



**ಬೆಳಗಾವಿ :** ಉತ್ತರ ಕರ್ನಾಟಕದ ಶಕ್ತಿದೇವಿ ಸವದತ್ತಿಯ ಯಲ್ಲಮ್ಮನ ಗುಡ್ಡದ ಪ್ರಸಿದ್ಧ ಯಲ್ಲಮ್ಮ ದೇವಿ ದೇವಸ್ಥಾನದ ಹುಂಡಿ ಎಣಿಕೆ ಕಾರ್ಯ ಮುಕ್ತಾಯವಾಗಿದೆ. ಒಂದೂವರೆ ತಿಂಗಳ ಅವಧಿಯಲ್ಲಿ 1.96 ಕೋಟಿ ರೂಪಾಯಿಕಾಣಿಕೆಸಂಗ್ರಹವಾಗಿದೆ.ಏಪ್ರಿಲ್1ರಿಂದಮೇ20ರಅವಧಿಯಲ್ಲಿ ಭಕ್ತರು ಒಪ್ಪಿಸಿರುವ ಕಾಣಿಕೆಯ ಎಣಿಕೆ ಕಾರ್ಯ ನಿನ್ನೆ ಮುಗಿಯಿತು. 1.71 ಕೋಟಿ ರೂ. ನಗದು, 20.44 ಲಕ್ಷ ರೂ. ಮೌಲ್ಯದ ಚಿನ್ನಾಭರಣ ಹಾಗು 4.44 ಲಕ್ಷ ರೂ. ಮೌಲ್ಯದ ಬೆಳ್ಳಿ ಆಭರಣಗಳು ಇದರಲ್ಲಿ ಸೇರಿವೆ. ರಾಜ್ಯ ಸರ್ಕಾರದ ಮಹತ್ವಾಕಾಂಕ್ಷಿ ಶಕ್ತಿ ಯೋಜನೆಯ ಪರಿಣಾಮ ಯಲ್ಲಮ್ಮ ಗುಡ್ಡಕ್ಕೆ ಅಪಾರ ಸಂಖ್ಯೆಯ ಮಹಿಳಾ ಭಕ್ತರು ಭೇಟಿ ನೀಡುತ್ತಿದ್ದಾರೆ. ಪ್ರತಿವರ್ಷ ಈ ಅವಧಿಯಲ್ಲಿ ಹುಂಡಿ ಎಣಿಕೆ ನಡೆದಾಗ 1 ಕೋಟಿಯಿಂದ 1.5 ಕೋಟಿ ರೂ.ವರೆಗೆ ಕಾಣಿಕೆ ಸಂಗ್ರಹವಾಗುತ್ತಿತ್ತು. ಆದರೆ, ಈ ವರ್ಷ 46 ಲಕ್ಷಕ್ಕೂ ಹೆಚ್ಚು ಕಾಣಿಕೆ ಸಂಗ್ರಹವಾಗಿದೆ. ದೇವಸ್ಥಾನ ಕಾರ್ಯನಿರ್ವಾಹಕ ಅಧಿಕಾರಿ ಎಸ್.ಪಿ.ಬಿ.ಮಹೇಶ ಪ್ರತಿಕ್ರಿಯಿಸಿ, "ಈ ಬಾರಿ ಹೆಚ್ಚು ಕಾಣಿಕೆ ಸಂಗ್ರಹವಾಗಿದೆ. ಶಕ್ತಿ ಯೋಜನೆ ಜಾರಿಯಾದಾಗಿನಿಂದ ಮಹಿಳಾ ಭಕ್ತರ ಸಂಖ್ಯೆ ಹೆಚ್ಚಾಗಿದೆ. ಕಾಣಿಕೆ ಮೊತ್ತವನ್ನು ದೇವಸ್ಥಾನದಲ್ಲಿ ಮೂಲಭೂತ ಸೌಕರ್ಯ ಸೇರಿ ಮತ್ತಿತರ ಅಭಿವೃದ್ಧಿ ಕಾರ್ಯಗಳಿಗೆ ಬಳಸಲಾಗುವುದು" ಎಂದು ತಿಳಿಸಿದರು.

# ಉಪಾಧ್ಯಕ್ಷರಾಗಿ ಜಿ.ಬಿ. ಶಿವಪೂರ ಆಯ್ಕೆ



**ಮುಧೋಳ :** ತಾಲೂಕಿನ ಮುಗಳಖೋಡದ ಗ್ರಾಮ ಪಂಚಾಯಿತಿಯ ಮಾಜಿ ಅಧ್ಯಕ್ಷ ಭಾರತೀಯ ಜನತಾ ಪಕ್ಷದ ಮುಖಂಡ ಗುರುಬಸು ಶಿವಪೂರ ಅವರು ತಾಲೂಕಿನ ಗ್ರಾಮೀಣ ಘಟಕದ ಉಪಾಧ್ಯಕ್ಷರಾಗಿ ಜುಲೈ 27 ರಂದು ಆಯ್ಕೆಯಾಗಿದ್ದಾರೆ. ಶಿವಪೂರ ಅವರನ್ನು ಹಿರಿಯರಾದ ಆರ್. ಎಸ್. ಸುಣಗಾರ, ಎಸ್. ಆರ್. ಬೆಟಗೇರಿ, ಮಲ್ಲಪ್ಪ ಬೀಸನಕೊಪ್ಪ , ಹನುಮಂತ ಕೌಜಲಗಿ, ಗ್ರಾಮ ಪಂಚಾಯಿತಿ ಸದಸ್ಯ ಯಮನಪ್ಪ ಜೋಗಿ, ಪಿ. ಬಿ. ಸುಣಗಾರ ಸೇರಿದಂತೆ ಭಾರತೀಯ ಜನತಾ ಪಕ್ಷದ ಎಲ್ಲಾ ಮುಖಂಡರು, ಸದಸ್ಯರು ಅಭಿನಂದಿಸಿದ್ದಾರೆ.

## ಸ್ವಚ್ಛ ಗ್ರಾಮ, ಜೀವನದ ಶಿಸ್ತು ಮತ್ತು ಸೌಹಾರ್ದತೆ: ಎನ್.ಎಸ್.ಎಸ್.ನ ಮುಖ್ಯ ಉದ್ದೇಶ: ಪ್ರಭುಸ್ವಾಮಿ ಸರಗಣಾಚಾರಿ




**ಬಾಗಲಕೋಟೆ :** ಗ್ರಾಮದ ಸ್ವಚ್ಛತೆ, ಜೀವನದ ಶಿಸ್ತು ಮತ್ತು ಸೌಹಾರ್ದತೆ ಇವು ಎನ್.ಎಸ್.ಎಸ್‌ನ ಮುಖ್ಯ ಉದ್ದೇಶಗಳಾಗಿವೆ ಎಂದು ಮುಚಖಂಡಿ ವೀರಭದ್ರೇಶ್ವರ ದೇವಸ್ಥಾನದ ಪ್ರಧಾನ ಅರ್ಚಕರಾದ ಪ್ರಭುಸ್ವಾಮಿ ಸರಗಣಾಚಾರಿ ಹೇಳಿದರು.

ಬಸವೇಶ್ವರ ವಾಣಿಜ್ಯ ಮಹಾವಿದ್ಯಾಲಯ, ಬಾಗಲಕೋಟೆಯ ರಾಷ್ಟ್ರೀಯ ಸೇವಾ ಯೋಜನಾ ಘಟಕಗಳ ವತಿಯಿಂದ ಮುಚಖಂಡಿಯಲ್ಲಿ ಒಂದು ವಾರದ ಕಾಲ ಹಮ್ಮಿಕೊಂಡ ವಾರ್ಷಿಕ ವಿಶೇಷ ಶಿಬಿರಕ್ಕೆ ಮಂಗಳವಾರ ಚಾಲನೆ ನೀಡಿ ಮಾತನಾಡಿ ಅವರು ಎನ್.ಎಸ್.ಎಸ್ ಶಿಬಿರಗಳು, ವಿದ್ಯಾರ್ಥಿಗಳಲ್ಲಿ ಜೀವನದ ಶಿಸ್ತು, ಸೌಹಾರ್ದತೆ ಮತ್ತು ಗ್ರಾಮ ನೈರ್ಮಲ್ಯದ ಪರಿಕಲ್ಪನೆಯನ್ನು ಮೂಡಿಸುತ್ತದೆ, ಇಂತಹ ಶಿಬಿರಗಳಲ್ಲಿ ವಿದ್ಯಾರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕೆಂದರು. ಕಾರ್ಯಕ್ರಮದಲ್ಲಿ ಬಿ.ವಿ.ವಿ. ಸಂಘದ ಕಾಲೇಜುಗಳ ಆಡಳಿತ ಮಂಡಳಿಯ, ಪದನಿಮಿತ್ಯ ಕಾರ್ಯದರ್ಶಿ ಡಾ. ಎಸ್. ಎಂ. ಗಾಂವ್ಕರ್ ಎನ್.ಎಸ್.ಎಸ್. ಮಾತನಾಡಿ, ಎನ್.ಎಸ್.ಎಸ್ ಬೆಳೆದು ಬಂದ ದಾರಿಯನ್ನ ಶಿಬಿರಾರ್ಥಿಗಳಿಗೆ ತಿಳಿಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಮಹಾವಿದ್ಯಾಲಯದ ಪ್ರಾಚಾರ್ಯ ಡಾ. ಜಗನ್ನಾಥ್ ವಿ. ಚೌವ್ಹಾಣ ವಹಿಸಿದ್ದರು. ಎನ್. ಎಸ್. ಎಸ್. ಅಧಿಕಾರಿಗಳಾದ ಡಾ. ಎಂ. ಎಂ. ಹುದ್ದಾರ, ಕುಮಾರಿ ಪ್ರಿಯಾಂಕಾ ಮಠದ, ಹಾಗೂ ಶಿಬಿರದ ಸಂಘಟಕರಾದ ರವಿ ಬಳಿಗೇರಿ, ಅಮೃತ ಗದ್ದನಕೇರಿ, ಶಿಬಿರಾರ್ಥಿಗಳು ಮತ್ತು ಗ್ರಾಮಸ್ಥರು ಉಪಸ್ಥಿತರಿದ್ದರು.

## ಶಿವಬೋಧರಂಗ ಪದವಿ ಪೂರ್ವ ಕಾಲೇಜಿನಲ್ಲಿ ಕಾರ್ಗಿಲ್ ವಿಜಯ ದಿನಾಚರಣೆ



**ಮೂಡಲಗಿ:** 1999 ಮೇನಲ್ಲಿ ಪ್ರಾರಂಭವಾದ ಕಾರ್ಗಿಲ್ ಯುದ್ಧವು ಸತತ ಎರಡು ತಿಂಗಳಗಳ ಕಾಲ ಜರುಗಿತು, ಈ ಯುದ್ಧದಲ್ಲಿ ಸರಿಸುಮಾರು 527 ವೀರಯೋಧರು ವೀರ ಮರಣ ಹೊಂದಿದರು, ಈ ಯುದ್ಧವು ದೇಶದ ಅತಿ ಎತ್ತರವಾದ ಹಾಗೂ ದುರ್ಗಮ ಮತ್ತು ಅನೇಕ ಗುಡ್ಡಗಾಡು ಪ್ರದೇಶವಿದ್ದರು ಕೂಡಾ ನಮ್ಮ ದೇಶದ ಸೈನಿಕರು ಧೈರ್ಯ ಹಾಗೂ ಸಹಾಸದೊಂದಿಗೆ ಹೋರಾಡಿ ಜಯವನ್ನು ತಂದಿದ್ದಾರೆ ಎಂದು ಮಾಜಿ ಸೈನಿ ಮಹಾವೀರ ಶಿವಭೋದ ಉಪ್ಪಿನ ಹೇಳಿದರು

ಪಟ್ಟಣದ ಮೂಡಲಗಿ ಶಿಕ್ಷಣ ಸಂಸ್ಥೆಯ ಶ್ರೀ ಶಿವಬೋಧರಂಗ ಪದವಿ ಪೂರ್ವ ಮಹಾವಿದ್ಯಾಲಯದಲ್ಲಿ ಶುಕ್ರವಾರ ಕಾರ್ಗಿಲ್ ವಿಜಯದಿನ ಕಾರ್ಯಕ್ರಮದಲ್ಲಿ ಸನ್ಮಾನ ಸ್ವೀಕರಿಸಿ ಮಾತನಾಡಿದರು, ಕಾರ್ಗಿಲ್ ಯುದ್ದದಲ್ಲಿ ಸೈನಿಕರ ಶ್ರಮ ಮತ್ತು ಬಲಿದಾನ ಹಾಗೂ ಅವರ ಪ್ರಾಣತ್ಯಾಗದ ಸ್ಮರಣಾರ್ಥವಾಗಿ ಪ್ರತಿ ವರ್ಷವು ಜುಲೈ 26ರಂದು ಕಾರ್ಗಿಲ್ ವಿಜಯೋತ್ಸವವನ್ನು ಇಡೀ ಭಾರತ ದೇಶದಲ್ಲಿ ಆಚರಿಸಲಾಗುತ್ತದೆ ಎಂದರು.

ಈ ಕಾರ್ಯಕ್ರಮದ ಅಧ್ಯಕ್ಷವಹಿಸಿದ ಶಿವಬೋಧರಂಗ ಪದವಿ ಪೂರ್ವ ಮಹಾವಿದ್ಯಾಲಯದ ಪ್ರಾಚಾರ್ಯ ಎಮ್.ಎಸ್.ಪಾಟೀಲ ಮಾತನಾಡಿ, ದೇಶದ ಪ್ರತಿಯೊಬ್ಬ ಭಾರತೀಯನಿಗೆ ರಕ್ತ ಹರಿಸಿದ ಯೋಧರನ್ನು ಸ್ಮರಿಸುವ ದಿನವಾಗಿದೆ, 527 ವೀರಯೋಧರು ವೀರ ಮರಣ ಹೊಂದಿದ್ದಾರೆ, ನಮಗೆ ದೇಶದ ಸೇವೆ ಮಾಡಲು ಅವಕಾಶ ಸಿಕ್ಕರೇ ಆ ಕ್ಷಣದಿಂದಲೇ ಆ ಕಾರ್ಯದಲ್ಲಿ ತೊಡಗಬೇಕು ಎಂದರು. ಕಾರ್ಯಕ್ರಮದಲ್ಲಿ ಕಾಲೇಜಿನ ಉಪನ್ಯಾಸಕ ಎಸ್.ಕೆ.ಹೀರೆಮಠ, ಬಿ.ಜಿ.ಗಡಾದ, ಎಲ್.ಆರ್.ಧರ್ಮಟ್ಟಿ, ಎಚ್.ಎಮ್.ಹತ್ತರಕಿ, ಆರ್.ಎಸ್.ಹಾದಿಮನಿ, ಎಚ್.ಡಿ.ಚಂದರಗಿ, ಎಸ್.ಪಿ.ಸಣ್ಣಮೇತ್ರಿ, ಆರ್.ಎಚ್.ಯಕ್ಕುಂಡಿ, ಎಮ್.ಜಿ.ಹೆಬ್ಬಳ್ಳಿ, ಡಾ|| ಆರ್.ಪಿ.ಬಿರಾದಾರ, ಎಸ್.ಕೆ.ಮಠದ ಹಾಗೂ ಕಾಲೇಜಿನ ಎಲ್ಲ ವಿದ್ಯಾರ್ಥಿಗಳು ಭಾಗವಹಿಸಿದ್ದರು.

# ಮಕ್ಕಳಿಗೆ ಉತ್ತಮ ಶಿಕ್ಷಣ ನೀಡಿ: ಪ್ರಭು ದೇವರು



**ಬನಹಟ್ಟಿ :** ಕಾಯಕ ಜೀವಿ ಹಡಪದ ಅಪ್ಪಣ್ಣನವರ ತತ್ವ, ಸಿದ್ಧಾಂತಗಳನ್ನು ಪ್ರತಿಯೊಬ್ಬರೂ ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳುವುದರ ಮೂಲಕ ಸಮಾಜ ಬಾಂಧವರು ತಮ್ಮ ಮಕ್ಕಳಿಗೆ ಉತ್ತಮ ಶಿಕ್ಷಣ ನೀಡಬೇಕು ಎಂದು ಚಿಮ್ಮಡದ ಪ್ರಭು ದೇವರು ನುಡಿದರು.

ಅವರು ಗುರುವಾರ ಇಲ್ಲಿನ ಸಿದ್ಧರಾಮೇಶ್ವರ ಕಲ್ಯಾಣ ಮಂಟಪದಲ್ಲಿ ಹಡಪದ ಅಪ್ಪಣ್ಣ ಸಮಾಜ ಬಾಂಧವರು ಹಮ್ಮಿಕೊಂಡ ಅಪ್ಪಣ್ಣಪ್ಪನವರ 890 ನೇ ಜಯಂತ್ಯೋತ್ಸವದ ಸಮಾರಂಭದಲ್ಲಿ ಮಾತನಾಡಿದರು.

ಅಪ್ಪಣ್ಣಪ್ಪನವರು ಬಸವಣ್ಣನ ಆಪ್ತ ಕಾರ್ಯದರ್ಶಿಗಳಾಗಿದ್ದರು. ಶ್ರದ್ಧೆ, ಭಕ್ತಿಯಿಂದ ಕಾಯಕವನ್ನು ಮಾಡುತ್ತಿದ್ದರು. ಇಂದಿನ ದಿನಗಳಲ್ಲಿ ನಾವು ಶಿವಶರಣರ ಸ್ಮರಣೆಯನ್ನು ಮಾಡಬೇಕು. ಜನರು ಮೂಢ ನಂಬಿಕೆಗಳಿಂದ ಹೊರ ಬರಬೇಕಾಗಿದೆ. ಪ್ರತಿಯೊಬ್ಬರಲ್ಲಿ ಸಮಾಜದ ಬಗ್ಗೆ ಅಭಿಮಾನವಿರಬೇಕು ಎಂದು ಪ್ರಭು ದೇವರು ನುಡಿದರು.

ಹಿರೇಮಠದ ಶರಣಬಸವ ಶಿವಾಚಾರ್ಯರು ಮಾತನಾಡಿ, ಸಮಾಜ ಬಾಂಧವರು ಒಗ್ಗಟ್ಟಾಗುವುದರಿಂದ ಅನೇಕ ಸೌಲಭ್ಯಗಳನ್ನು ಪಡೆದುಕೊಳ್ಳಲು ಸಾಧ್ಯ. ಕಾಯಕ ತತ್ವವನ್ನು ತಮ್ಮಲ್ಲಿ ಅಳವಡಿಸಿಕೊಂಡು ಉತ್ತಮ ಪ್ರಜೆಗಳಾಗಿ ಸಮಾಜ ಬಾಂಧವರು ಜೀವನ ಸಾಗಿಸಬೇಕು ಎಂದರು.

ಕಾರ್ಯಕ್ರಮದಲ್ಲಿ ಸಾಧನೆ ಮಾಡಿದ ಲೆಕ್ಕಪರಿಶೋಧಕ ಮಹೇಂದ್ರ ಹೊರಗಿನಮನಿ, ಅರಣ್ಯಾಧಿಕಾರಿ ಮಲ್ಲಪ್ಪ ನಾವಿ, ನಿವೃತ್ತ ಸೇನಾಧಿಕಾರಿ ಪ್ರವೀಣ ಆಲಗೂರ ಮತ್ತು ಸಮಾಜ ಅಧ್ಯಕ್ಷ ಲಕ್ಕಪ್ಪ ನಾವಿಯವರನ್ನು ಹಾಗೂ ಸಮಾಜದ ಪ್ರತಿಭಾವಂತ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು.

ಭೀಮಪ್ಪ ಹೊರಗಿನಮನಿ, ಬಾಳಪ್ಪ ನಾವಿ, ಈರಣ್ಣ ಆಲಗೂರ, ಮಲ್ಲೇಶ ನಾವಿ, ಕುಮಾರ ನಾವಿ, ಪ್ರಕಾಶ ನಾವಿ, ಗಣೇಶ ನಾವಿ, ಸುರೇಶ ನಾವಿ ಸೇರಿದಂತೆ, ರಬಕವಿ, ಬನಹಟ್ಟಿ, ತೇರದಾಳ, ಮಹಾಲಿಂಗಪುರ ಸೇರಿದಂತೆ ಸುತ್ತ ಮುತ್ತಲಿನ ಗ್ರಾಮೀಣ ಪ್ರದೇಶದ ಸಮಾಜದ ಪ್ರಮುಖರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

# ಘಟಪ್ರಭಾ ನದಿಗೆ 57 ಸಾವಿರ ಕ್ಯೂಸೆಕ್ ನೀರು

## ನಂದಗಾಂವ ಗ್ರಾಮಕ್ಕೆ ಎಸಿ, ತಹಶೀಲ್ದಾರ ಭೇಟಿ: ಗ್ರಾಮಸ್ಥರ ಸ್ಥಳಾಂತರಕ್ಕೆ ಸೂಚನೆ

**ಮಹಾಲಿಂಗಪುರ :** ಪಶ್ಚಿಮ ಘಟ್ಟಗಳ ಪ್ರದೇಶ ಹಾಗೂ ಬೆಳಗಾವಿ ಜಿಲ್ಲೆಯಲ್ಲಿ ವ್ಯಾಪಕ ಮಳೆಯ ಹಿನ್ನಲೆ ಕಳೆದ 8-10 ದಿನಗಳಿಂದ ಘಟಪ್ರಭಾ ನದಿಯು ತುಂಬಿ ಹರಿಯುತ್ತಿರುವ ಕಾರಣ, ಸಮೀಪದ ನಂದಗಾಂವ-ಅವರಾದಿ, ಢವಳೇಶ್ವರ-ಢವಳೇಶ್ವರ, ಮಿರ್ಜಿ-ಅಕ್ಕಿಮರಡಿ ಹೊಸ ಸೇತುವೆ ಸೇರಿದಂತೆ ಮೂರು ಸೇತುವೆಗಳು ಹಾಗೂ ಮುಧೋಳ ತಾಲೂಕಿನ 6 ಸೇತುವೆಗಳು ಸೇರಿದಂತೆ 9 ಸೇತುವೆಗಳು ಸಂಪೂರ್ಣ ಜಲಾವೃತವಾಗಿವೆ.

ಮೂರು ಸೇತುವೆಗಳ ಜಲಾವೃತದಿಂದಾಗಿ ಮಹಾಲಿಂಗಪುರದಿಂದ ಮುಧೋಳ ತಾಲೂಕಿನ ಮಿರ್ಜಿ, ಒಂಟಗೋಡಿ, ಚನ್ನಾಳ, ಮಲ್ಲಾಪೂರ ಗ್ರಾಮಗಳು ಹಾಗೂ ಬೆಳಗಾವಿ ಜಿಲ್ಲೆಯ ಗಡಿಭಾಗದ ಮೂಡಲಗಿ ತಾಲೂಕಿನ ಢವಳೇಶ್ವರ, ಬಿಸನಕೊಪ್ಪ, ಹುಣಶ್ಯಾಳ ಪಿವೈ, ವೆಂಕಟಾಪೂರ, ಅವರಾದಿ, ಅಳ್ಳಿಮಟ್ಟಿ, ಯರಗುದ್ರಿ, ತಿಮ್ಮಾಪೂರ, ಹೊಸಯರಗುದ್ರಿ, ಕುಲಗೋಡ, ಕೌಲಜಗಿ, ಯಾದವಾಡ ಗ್ರಾಮಗಳಿಗೆ ಹೋಗುತ್ತಿದ್ದ ಸಂಪರ್ಕ ರಸ್ತೆಗಳ ಕಡಿತವಾಗಿ ಈ ಎಲ್ಲಾ ಗ್ರಾಮಗಳಿಗೆ ಹೋಗುವವರು ಗೋಕಾಕ, ಮುಧೋಳ ಮಾರ್ಗವಾಗಿ 50-60ಕಿಮೀ ಸುತ್ತುವರೆದು ಹೋಗುವಂತಹ ಸ್ಥಿತಿ ನಿರ್ಮಾಣವಾಗಿದೆ.



ಘಟಪ್ರಭಾ ನದಿಗೆ 57 ಸಾವಿರ ಕ್ಯೂಸೆಕ್ ನೀರು: ದುಪದಾಳ ಜಲಾಶಯದಿಂದ 47,140 ಕ್ಯೂಸೆಕ್, ಮಾರ್ಕಂಡೇಯ ಜಲಾಶಯದಿಂದ 7380, ಬಳ್ಳಾರಿ ನಾಲಾದಿಂದ 2896 ಕ್ಯೂಸೆಕ್ ಸೇರಿ ಒಟ್ಟು 57,416 ಕ್ಯೂಸೆಕ್ ನೀರು ಘಟಪ್ರಭಾ ನದಿಗೆ ಹರಿದು ಬರುತ್ತಿರುವ ಕಾರಣ ಘಟಪ್ರಭಾ ನದಿ ಪಾತ್ರದ ಗ್ರಾಮಗಳಾದ ಮಿರ್ಜಿ, ನಂದಗಾಂವ, ಢವಳೇಶ್ವರ, ಮಾರಾಪೂರ ಗ್ರಾಮದ ತಂಗು ಪ್ರದೇಶದಲ್ಲಿನ ಕೆಲ ವಸತಿಗಳಿಗೆ ಪ್ರವಾಹ ಸ್ಥಿತಿ ಎದುರಾಗಲಿದೆ.

ನಂದಗಾಂವ ಗ್ರಾಮಕ್ಕೆ ಎಸಿ ಭೇಟಿ :

ಘಟಪ್ರಭಾ ನದಿಯ ಪ್ರವಾಹದಿಂದ ಈಭಾಗದಲ್ಲಿ ಮೊಟ್ಟ ಮೊದಲಿಗೆ ಪ್ರವಾಹ ಎದುರಿಸುವ ಹಳೆ ನಂದಗಾಂವ ಗ್ರಾಮಕ್ಕೆ ಗುರುವಾರ ಜಮಖಂಡಿ ಎಸಿ ಶ್ವೇತಾ ಬೀಡಿಕರ, ರಬಕವಿ-ಬನಹಟ್ಟಿ ತಹಶೀಲ್ದಾರ ಗಿರೀಶ ಸ್ವಾದಿ ಭೇಟಿ ನೀಡಿ ಪ್ರವಾಹ ಸ್ಥಿತಿಯನ್ನು ಅವಲೋಕಿಸಿದರು.

ಈ ಸಂದರ್ಭದಲ್ಲಿ ಜಮಖಂಡಿ ಎಸಿ ಶ್ವೇತಾ ಬೀಡಿಕರ ಉದಯವಾಣಿಯೊಂದಿಗೆ ಮಾತನಾಡಿ ಹಿಡಕಲ್ ಜಲಾಶಯದಿಂದ ಬುಧವಾರ ಸಂಜೆ 10 ಸಾವಿರ ಕ್ಯೂಸೆಕ್ ನೀರನ್ನು ಬಿಡುಗಡೆ ಮಾಡಲಾಗಿತ್ತು. ಗುರುವಾರ ಮಧ್ಯಾಹ್ನರಿಂದ ಹಿಡಕಲ್ ಜಲಶಯದಿಂದ 24500 ಕ್ಯೂಸೆಕ್‌ಗೆ ಹೆಚ್ಚಿಸಿದ್ದರಿಂದ ಘಟಪ್ರಭಾ ನದಿಗೆ ಅಪಾರ ಪ್ರಮಾಣದಲ್ಲಿ ನೀರು ಹರಿದು ಬರುತ್ತಿರುವ ಕಾರಣ ಘಟಪ್ರಭಾ ನದಿ ಪಾತ್ರದ ಗ್ರಾಮಗಳ ಜನತೆಯು ಎಚ್ಚರಿಕೆಯಿಂದ ಇರಬೇಕು. ರಬಕವಿ-ಬನಹಟ್ಟಿ ಮತ್ತು ಮುಧೋಳ ತಾಲೂಕಿನ ವ್ಯಾಪ್ತಿಯಲ್ಲಿ ಬರುವ 12 ಸೇತುವೆಗಳಲ್ಲಿ ಮುಧೋಳ, ಚಿಂಚಖಂಡಿ, ಮಾಚಕನೂರ ಹೊರತುಪಡಿಸಿ ಬಹುತೇಕ ಎಲ್ಲಾ ಸೇತುವೆಗಳು ಜಲಾವೃತವಾಗಿವೆ. ಪ್ರವಾಹ ಪೀಡಿತ ಗ್ರಾಮಗಳಿಗೆ ನೇಮಕಗೊಳಿಸಿರುವ ಎಲ್ಲಾ ನೊಡೆಲ್ ಅಧಿಕಾರಿಗಳು ಹಾಗೂ ಸ್ಥಳಿಯಮಟ್ಟದ ಅಧಿಕಾರಿಗಳು, ಮುಂದಿನ 2-3 ದಿನಗಳಲ್ಲಿ ಎದುರಾಗಬಹುದಾದ ಪ್ರವಾಹ ಪರಿಸ್ಥಿಯನ್ನು ಸಮರ್ಥವಾಗಿ ಎದುರಿಸಲು ಸ್ಥಳದಲ್ಲೆ ಇದ್ದು ಕಾರ್ಯನಿರ್ವಹಿಸಬೇಕು.

ನದಿಗೆ ನೀರು ಹೆಚ್ಚಾಗುತ್ತಿರುವ ಕಾರಣ ಮುಂಜಾಗ್ರತಾ ಕ್ರಮವಾಗಿ ಹಳೆ ನಂದಗಾಂವದಲ್ಲಿನ ಎಲ್ಲಾ ಕುಟುಂಬಗಳನ್ನು ಶುಕ್ರವಾರ ಮುಂಜಾನೆಯಿಂದ ಹೊಸ ನಂದಗಾಂವ ಗ್ರಾಮಕ್ಕೆ ಸ್ಥಳಾಂತರಿಸಲು ತಹಶೀಲ್ದಾರರಿಗೆ ಸೂಚನೆ ನೀಡಿದ್ದೇನೆ ಎಂದರು. ಈ ಸಂದರ್ಭದಲ್ಲಿ ರಬಕವಿ-ಬನಹಟ್ಟಿ ತಹಶೀಲ್ದಾರ ಗಿರೀಶ ಸ್ವಾದಿ, ನೊಡೆಲ್ ಅಧಿಕಾರಿ ವೆಂಕಟೇಶ ಬೆಳಗಲ್, ಠಾಣಾಧಿಕಾರಿ ಪ್ರವೀಣ ಬೀಳಗಿ, ತಾಪಂ ಇಓ, ಗ್ರಾಮಲೆಕ್ಕಾಧಿಕಾರಿಗಳು, ಪಿಡಿಓ ಸೇರಿದಂತೆ ವಿವಿಧ ಇಲಾಖೆಯ ಅಧಿಕಾರಿಗಳು ಇದ್ದರು.

# ಎಫ್‌ಎಸ್‌ಎಸ್‌ಎಐ ಬೆಳವಣಿಗೆ ಮತ್ತು ಮುಂದಿನ ಹಾದಿ: ಕೇಂದ್ರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಜೆ.ಪಿ. ನಡ್ಡಾ



**ನವದೆಹಲಿ :** ಎನ್‌ಡಿಎ ಸರ್ಕಾರದ ಅವಧಿಯಲ್ಲಿ ಎರಡನೇ ಬಾರಿಗೆ ನಾನು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರಾಗಿ ಅಧಿಕಾರವಹಿಸಿಕೊಂಡ ನಂತರ ಕಳೆದ ವಾರ ನಾನು ಭಾರತೀಯ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಪ್ರಾಧಿಕಾರ (ಎಫ್ ಎಸ್ ಎಸ್ ಎಐ) ಗೆ ಭೇಟಿ ನೀಡಿದ್ದಾಗ ನನಗೆ 2014ರಲ್ಲಿ ಮೊದಲ ಬಾರಿಗೆ ಆರೋಗ್ಯ ಸಚಿವನಾಗಿ ಕಾರ್ಯನಿರ್ವಹಿಸಿದ್ದು ನೆನಪಿಗೆ ಬಂದಿತು. ವಿಶ್ವದ ಎರಡನೇ ಅತಿ ದೊಡ್ಡ ಜನಸಂಖ್ಯೆಯು ಸೇವಿಸುವ ಆಹಾರ ಉತ್ಪನ್ನಗಳಿಗೆ ಮಾನದಂಡಗಳು ಮತ್ತು ನೀತಿಗಳನ್ನು ರೂಪಿಸುವ ಬೃಹತ್ ಜವಾಬ್ದಾರಿಯನ್ನು ಹೊಂದಿರುವ ದೇಶದ ಆಹಾರ ಸುರಕ್ಷತೆ ನಿಯಂತ್ರಕನಾಗಿ ತನ್ನನ್ನು ತಾನು ಗುರುತಿಸಿಕೊಳ್ಳಲು ಶ್ರಮಿಸುವ ಸಂಸ್ಥೆಯು ಹೊಸ ಬೆಳವಣಿಗೆಗೆ ಸಾಕ್ಷಿಯಾಗುತ್ತಿದೆ.

ಮೊದಲ ಬಾರಿಗೆ ನಾನು ಎಫ್ ಎಸ್ ಎಸ್ ಎಐ ತಂಡವನ್ನು ಮತ್ತು ನಾನಾ ಪಾಲುದಾರರನ್ನು 2016ರ ಆಗಸ್ಟ್ 22ರಂದು ಆಹಾರ ಸುರಕ್ಷತಾ ಮತ್ತು ಗುಣಮಟ್ಟ ಕಾಯ್ದೆ (ಎಫ್ ಎಸ್ ಎಸ್‌ಎ) 2006 ಜಾರಿಯಾದ ದಶಕದ ಕಾರ್ಯಕ್ರಮದಲ್ಲಿ ಭೇಟಿ ಮಾಡಿದ್ದೆನು, ಎಫ್ ಎಸ್ ಎಸ್ ಎಐನ ದೂರದೃಷ್ಟಿ ಅತ್ಯಂತ ಸ್ಪಷ್ಟವಾಗಿದೆ- ನೀತಿಗಳನ್ನು ಬಲವರ್ಧನೆಗೊಳಿಸುವುದು, ಎದುರಾಗುವ ಸವಾಲುಗಳನ್ನು ಪರಿಹರಿಸುವುದು, ನಾಗರಿಕರು ಮತ್ತು ಆಹಾರ ಉದ್ಯಮದಲ್ಲಿ ಅತ್ಯಂತ ವೇಗವಾಗಿ ಆಗುತ್ತಿರುವ ಸಾಮಾಜಿಕ ಮತ್ತು ನಡವಳಿಕೆ ಬದಲಾವಣೆಗಳನ್ನು ಪೋಷಿಸುವ ಉಪಕ್ರಮಗಳ ಕಾರ್ಯಕ್ರಮಗಳನ್ನು ಆಯೋಜಿಸುವುದಾಗಿದೆ. ಈ ಉಪಕ್ರಮಗಳು ಈಟ್ ರೈಟ್ ಇಂಡಿಯಾ ಚಳವಳಿಯ ಅಡಿಯಲ್ಲಿ ಸುಂದರವಾಗಿ ವಿಲೀನಗೊಂಡಿವೆ, ಇದು ಎಲ್ಲಾ ಭಾರತೀಯರಿಗೆ ಸುರಕ್ಷಿತ, ಆರೋಗ್ಯಕರ ಮತ್ತು ಸುಸ್ಥಿರ ಆಹಾರ ಖಾತ್ರಿಪಡಿಸಿಕೊಳ್ಳಲು ಸಮಗ್ರ ಸಂಪೂರ್ಣ ವ್ಯವಸ್ಥೆಯ ವಿಧಾನ ಅಳವಡಿಸಿಕೊಳ್ಳುವಂತೆ ಮಾಡಿದೆ.

ಆರೋಗ್ಯ ಸಚಿವಾಲಯ ಮತ್ತು ಎಫ್ ಎಸ್ ಎಸ್ ಎಐ ನಮ್ಮ ರಾಷ್ಟ್ರದ ಆಹಾರ ಸುರಕ್ಷತಾ ಆಯಾಮವನ್ನು ವೃದ್ಧಿಸಲು ದಣಿವರಿಯದೆ ಕಾರ್ಯನಿರ್ವಹಿಸುತ್ತಿವೆ. ಸದೃಢ ಆಹಾರ ಸುರಕ್ಷತಾ ಪೂರಕ ವ್ಯವಸ್ಥೆಯನ್ನು ಬಲವಾದ ಆಹಾರ ನೀತಿಗಳು ಮತ್ತು ಮಾನದಂಡಗಳ ಆಧಾರದ ಮೇಲೆ ಮಾತ್ರ ನಿರ್ಮಿಸಬಹುದು. ಎಫ್‌ಎಸ್‌ಎಸ್‌ಎಐನ ವೈಜ್ಞಾನಿಕ ಫಲಕಗಳು ಮತ್ತು ತಜ್ಞರ ಸಮಿತಿಗಳ 88 ಸಂಸ್ಥೆಗಳಿಂದ 286 ತಜ್ಞರನ್ನು ಒಳಗೊಂಡಂತೆ ಗಮನಾರ್ಹವಾಗಿ ವಿಸ್ತರಿಸಿವೆ ಎಂದು ತಿಳಿಯುವುದಕ್ಕೆ ಹರ್ಷದಾಯಕವಾಗಿದೆ. ಇದು ಜಾಗತಿಕ ಗುಣಮಟ್ಟಕ್ಕೆ ಸಮನಾದ ಮಾನದಂಡಗಳು ಮತ್ತು ನೀತಿಗಳ ಅಭಿವೃದ್ಧಿಯ ವೇಗವನ್ನು ಗಮನಾರ್ಹವಾಗಿ ವೃದ್ಧಿಸಿದೆ.

ಎಫ್‌ಎಸ್‌ಎಸ್‌ಎಐ ಶ್ಲಾಘನೀಯ ಸಾಧನೆಯೆಂದರೆ ಸಿರಿಧಾನ್ಯಗಳ ಮಾನದಂಡಗಳನ್ನು ನಿಗದಿಪಡಿಸಿರುವುದು. 2023ರಲ್ಲಿ ನಡೆದ ಜಾಗತಿಕ ಸಿರಿಧಾನ್ಯ (ಶ್ರೀ ಅನ್ನಾ) ಸಮ್ಮೇಳನದಲ್ಲಿ ಗೌರವಾನ್ವಿತ ಪ್ರಧಾನ ಮಂತ್ರಿಯವರು ಆ ಮಾನದಂಡಗಳನ್ನು ಬಿಡುಗಡೆ ಮಾಡಿದರು. ಈ ಮಾನದಂಡಗಳನ್ನು ಕೋಡೆಕ್ಸ್ ಅಲಿಮೆಂಟರಿಯಸ್ ಆಯೋಗದೊಂದಿಗೆ ಹಂಚಿಕೊಳ್ಳಲಾಗಿದೆ, ಇದರಿಂದಾಗಿ ಸಿರಿಧಾನ್ಯಗಳಿಗೆ ಜಾಗತಿಕ ಗುಂಪಿನ ಮಾನದಂಡಗಳ ಅಭಿವೃದ್ಧಿ ಮತ್ತು ಭಾರತವನ್ನು ಜಾಗತಿಕ ಮುಂಚೂಣಿಯಲ್ಲಿ ತಂದು ನಿಲ್ಲುವ ಉದ್ದೇಶಿವಿದೆ.

ನೀತಿಗಳು ಮತ್ತು ಮಾನದಂಡಗಳ ಅಭಿವೃದ್ಧಿಯ ಜೊತೆಗೆ ಹೆಚ್ಚುವರಿಯಾಗಿ ಸುರಕ್ಷಿತ ಆಹಾರವನ್ನು ಖಾತ್ರಿಪಡಿಸಿಕೊಳ್ಳಲು ಅವುಗಳ ಜಾರಿ ಮತ್ತು ಪರೀಕ್ಷೆಯು ಅಷ್ಟೇ ಅತ್ಯವಶ್ಯಕವಾಗಿದೆ. ಎಫ್ ಎಸ್ ಎಸ್ ಎಐ ಆಹಾರ ಪರೀಕ್ಷೆಯ ಮೂಲಸೌಕರ್ಯವು ಕಳೆದ ಎಂಟು ವರ್ಷಗಳಲ್ಲಿ ಗಮನಾರ್ಹ ಸುಧಾರಣೆಗಳನ್ನು ಕಂಡಿದೆ. ಗೌರವಾನ್ವಿತ ಪ್ರಧಾನ ಮಂತ್ರಿಯವರ ದೂರದೃಷ್ಟಿಯ ನಾಯಕತ್ವದಲ್ಲಿ, ರಾಜ್ಯ ಆಹಾರ ಪರೀಕ್ಷಾ ಪ್ರಯೋಗಾಲಯಗಳನ್ನು ಬಲಪಡಿಸಲು 482 ಕೋಟಿ ರೂ.ಗಳಿಗೆ ಸಂಪುಟ ಅನುಮೋದನೆ ನೀಡಿದೆ. ಎಫ್ ಎಸ್ ಎಸ್ ಎಐ "ಗಾಲಿಗಳ ಮೇಲೆ ಆಹಾರ ಸುರಕ್ಷತೆ "ಫುಡ್ ಸೇಫ್ಟಿ ಆನ್ ವೀಲ್ಸ್" ಹೆಸರಿನ ಮೊಬೈಲ್ ಆಹಾರ ಪ್ರಯೋಗಾಲಯಗಳನ್ನು ಒದಗಿಸುವ ಮೂಲಕ ದೂರದ ಪ್ರದೇಶಗಳನ್ನು ತಲುಪುತ್ತಿದೆ.

ನಾವು ಈ ಸಾಧನೆಗಳ ಸಂಭ್ರಮಾಚರಣೆಯಲ್ಲಿ ತೊಡಗಿರುವಾಗ ಸಸ್ಯಾಧಾರಿತ ಪ್ರೋಟೀನ್ಗಳು, ಪ್ರಯೋಗಾಲಯದಲ್ಲಿ ಬೆಳೆದ ಮಾಂಸ ಇತ್ಯಾದಿಗಳಂತಹ ಜಾಗತಿಕವಾಗಿ ಹೊರಹೊಮ್ಮುತ್ತಿರುವ ಪ್ರವೃತ್ತಿಗಳನ್ನು ಸಹ ನಾವು ಒಪ್ಪಿಕೊಳ್ಳಬೇಕು. ಎಫ್ ಎಸ್ ಎಸ್ ಎಐ ಸಸ್ಯಾಹಾರಿ ಆಹಾರಗಳು, ಸಾವಯವ ಉತ್ಪನ್ನಗಳು ಮತ್ತು ಆಯುರ್ವೇದ ಆಹಾರದಂತಹ ಆಹಾರ ಸುರಕ್ಷತೆಯ ಬೆಳವಣಿಗೆಯ ಪ್ರವೃತ್ತಿಗಳು, ಹೊಸ ವರ್ಗಗಳಿಗೆ ಪೂರ್ವಭಾವಿಯಾಗಿ ಮಾನದಂಡಗಳನ್ನು ಅಭಿವೃದ್ಧಿಪಡಿಸಿದೆ ಮತ್ತು ನಿರಂತರವಾಗಿ ಅಳವಡಿಸಿಕೊಳ್ಳುತ್ತಿದೆ.

ಜಾಗತಿಕ ಆಹಾರ ವ್ಯಾಪಾರವು ವಿಸ್ತರಣೆಯಾಗುತ್ತಿದ್ದಂತೆಯೇ, ಎಫ್‌ಎಸ್‌ಎಸ್‌ಎಐ ಕೋಡೆಕ್ಸ್ ನಂತಹ ವಿವಿಧ ವೇದಿಕೆಗಳಲ್ಲಿ ಜಾಗತಿಕ ನಿಯಂತ್ರಕರೊಂದಿಗೆ ತೊಡಗಿಸಿಕೊಳ್ಳುವ ಮೂಲಕ ಸದೃಢ ಅಂತಾರಾಷ್ಟ್ರೀಯ ಪಾಲುದಾರಿಕೆಯನ್ನು ರೂಪಿಸುತ್ತಿದ್ದು, ಇದು ಉತ್ತಮ ಪದ್ಧತಿಗಳನ್ನು ಹಂಚಿಕೊಳ್ಳಲು ಮತ್ತು ಬೆಳೆಯುತ್ತಿರುವ ವಿಶ್ವ ಜನಸಂಖ್ಯೆಗೆ ಸುರಕ್ಷಿತ, ಪೌಷ್ಟಿಕ ಆಹಾರ ಮತ್ತು ಆಹಾರ ಭದ್ರತೆಯನ್ನು ಖಾತ್ರಿಪಡಿಸಿಕೊಳ್ಳಲು ಸಾಮರಸ್ಯದ ವಿಧಾನಗಳನ್ನು ಅಭಿವೃದ್ಧಿಪಡಿಸುತ್ತದೆ. ಎಫ್ ಎಸ್ ಎಸ್ ಎಐ 2023 ರಲ್ಲಿ ದೆಹಲಿಯಲ್ಲಿ ಮೊದಲ ಜಾಗತಿಕ ಆಹಾರ ನಿಯಂತ್ರಕರ ಶೃಂಗಸಭೆಯನ್ನು (ಜಿಎಫ್ ಆರ್ ಎಸ್) ಆಯೋಜಿಸಿತ್ತು, ಅದು ಆಹಾರ ನಿಯಂತ್ರಕರಿಗೆ ಉದಯೋನ್ಮುಖ ಆಹಾರ ಸುರಕ್ಷತೆ ಸವಾಲುಗಳನ್ನು ಎದುರಿಸಲು ಮತ್ತು ಮೊದಲ ಬಾರಿಗೆ ಕೃತಕ ಬುದ್ಧಿಮತ್ತೆ ಬಳಕೆ ಮಾಡಲು ಸಹಯೋಗದ ವೇದಿಕೆಯಾಗಿದೆ. ಎಫ್ ಎಸ್ ಎಸ್ ಎಐ ಮುಂಬರುವ ತಿಂಗಳುಗಳಲ್ಲಿ ಜಿಎಫ್ ಆರ್ ಎಸ್ ನ ಎರಡನೇ ಆವೃತ್ತಿಗೆ ಸಜ್ಜಾಗಿದೆ.

ನಾವು ಆಹಾರ ಸುರಕ್ಷತೆಯ ಬಗ್ಗೆ ಚರ್ಚಿಸುವಾಗ, ಸಾಕ್ಷ್ಯಾಧಾರಿತ ಮಾಹಿತಿಯ ಮೂಲಕ ವಿವಿಧ ಆಹಾರ ಸುರಕ್ಷತೆ ವಿಷಯಗಳ ಕುರಿತು ಗ್ರಾಹಕರು ಮತ್ತು ನಾಗರಿಕರನ್ನು ಸಬಲೀಕರಣಗೊಳಿಸುವುದು ಅತಿ ಮುಖ್ಯವಾಗಿದೆ. ಆಗ ಮಾತ್ರ ನಮ್ಮ ಕೆಲಸ ಸಂಪೂರ್ಣಗೊಳ್ಳುತ್ತದೆ. ಆ ನಿಟ್ಟಿನಲ್ಲಿ ಎಫ್‌ಎಸ್‌ಎಸ್‌ಎಐನ ಈಟ್ ರೈಟ್ ಇಂಡಿಯಾ ಆಂದೋಲನದ ಪ್ರಮುಖ ಮಾಹಿತಿಯು ಪ್ರತಿ ಹಂತದಲ್ಲೂ ಗ್ರಾಹಕರನ್ನು ತಲುಪುತ್ತದೆ ಎಂದು ಖಾತ್ರಿಪಡಿಸಿಕೊಳ್ಳುವ ಮೂಲಕ ನಿರ್ಣಾಯಕ ಪಾತ್ರವನ್ನು ವಹಿಸುತ್ತಿದೆ. ಈ ಪರಿವರ್ತನಾತ್ಮಕ ಕಾರ್ಯಕ್ರಮವು ನಮ್ಮ ವ್ಯಾಪ್ತಿಯನ್ನು ಮತ್ತಷ್ಟು ವಿಸ್ತರಿಸಲು ಮತ್ತು ಉತ್ತಮ ಆಯ್ಕೆಗಳನ್ನು ನೀಡಲು ಆಹಾರ ವ್ಯವಹಾರಗಳನ್ನು ಉತ್ತೇಜಿಸುವ, ಸುರಕ್ಷಿತ ಮತ್ತು ಆರೋಗ್ಯಕರ ಆಹಾರ ಆಯ್ಕೆಗಳಿಗೆ ಬೇಡಿಕೆಯನ್ನು ಸಲ್ಲಿಸಲು ಗ್ರಾಹಕರನ್ನು ಸಶಕ್ತಗೊಳಿಸುವ ನಡವಳಿಕೆಯ ಬದಲಾವಣೆಗಳನ್ನು ಉತ್ತೇಜಿಸಲು ಬಳಸಲಾಗುತ್ತಿದೆ.

ಎಫ್ ಎಸ್ ಎಸ್ ಎಐ 2006 ಆಹಾರ ಉತ್ಪನ್ನಗಳಿಗೆ ಸಮಗ್ರ ಮಾನದಂಡಗಳನ್ನು ಕಡ್ಡಾಯಗೊಳಿಸುತ್ತದೆ ಮತ್ತು ಅವುಗಳು ಬಳಕೆಗೆ ಸುರಕ್ಷಿತವಾಗಿದೆ ಎಂಬುದನ್ನು ಖಾತ್ರಿಪಡಿಸುತ್ತದೆ. ಹೆಚ್ಚುವರಿಯಾಗಿ, ಆಹಾರ ಲೇಬಲಿಂಗ್ಗೆ ಸಂಬಂಧಿಸಿದ ನಿಯಮಗಳು ತಿಳುವಳಿಕೆಯಿಂದ ಆಯ್ಕೆಗಳನ್ನು ಮಾಡಲು ಗ್ರಾಹಕರಿಗೆ ಅಧಿಕಾರ ನೀಡುತ್ತದೆ. ಜಾಹೀರಾತು ಮತ್ತು ಹಕ್ಕುಗಳ ನೀತಿಗಳು ಆಹಾರ ಉತ್ಪನ್ನಗಳ ಮೇಲೆ ಆಹಾರ ವ್ಯವಹಾರಗಳಿಂದ ಯಾವುದೇ ತಪ್ಪುದಾರಿಗೆಳೆಯುವ ಹಕ್ಕುಗಳನ್ನು ಮಾಡುತ್ತಿಲ್ಲ ಎಂದು ಖಚಿತಪಡಿಸುತ್ತದೆ. ಗ್ರಾಹಕ ಸಂರಕ್ಷಣಾ ಕಾಯಿದೆ (ಸಿಪಿಎ) 2019 ಗ್ರಾಹಕರು ಎದುರಿಸುತ್ತಿರುವ ಆಧುನಿಕ ಸವಾಲುಗಳನ್ನು ಪರಿಹರಿಸುವಲ್ಲಿ ಪ್ರಮುಖ ಪಾತ್ರ ವಹಿಸಿದೆ, ವಿಶೇಷವಾಗಿ ತಪ್ಪುದಾರಿಗೆಳೆಯುವ ಜಾಹೀರಾತುಗಳು, ಅಸುರಕ್ಷಿತ ಅಥವಾ ಗುಣಮಟ್ಟವಿಲ್ಲದ ಆಹಾರದ ಬಗ್ಗೆ ದೂರುಗಳನ್ನು ಸಲ್ಲಿಸಲು ಸಾಕಷ್ಟು ಕಾರ್ಯವಿಧಾನಗಳನ್ನು ಒದಗಿಸುತ್ತದೆ.

ಆಹಾರ ಸುರಕ್ಷತೆಯು ಒಂದು ಸಹಯೋಗದ ಪ್ರಯತ್ನವಾಗಿದೆ ಮತ್ತು ಎಫ್ ಎಸ್ ಎಸ್ ಎಐ ಇಡೀ ಸರ್ಕಾರ ಮತ್ತು ಇಡೀ ವ್ಯವಸ್ಥೆಯ ವಿಧಾನಗಳೊಂದಿಗೆ ವಿವಿಧ ಸರ್ಕಾರಿ ಇಲಾಖೆಗಳು ಮತ್ತು ಇತರ ಪಾಲುದಾರರೊಂದಿಗೆ ನಿಕಟವಾಗಿ ಕಾರ್ಯನಿರ್ವಹಿಸುತ್ತಿದೆ. ಆಹಾರ ಸುರಕ್ಷತೆ ಮತ್ತು ಆರೋಗ್ಯ ಉಪಕ್ರಮಗಳಲ್ಲಿ ಉದ್ಯಮ ಮತ್ತು ಇತರ ಬಾಧ್ಯಸ್ಥಗಾರರನ್ನು ಪಾಲುದಾರರನ್ನಾಗಿ ಮಾಡುವ ಮೂಲಕ ಎಫ್‌ಎಸ್‌ಎಸ್‌ಎಐ ಸಕ್ರಿಯವಾಗಿ ಮುನ್ನಡೆಸುತ್ತಿದೆ ಮತ್ತು ಸಹಯೋಗದ ವಿಧಾನವನ್ನು ಅಳವಡಿಸಿಕೊಳ್ಳುತ್ತಿದೆ.

ಎಫ್ ಎಸ್ ಎಸ್ ಎಐ ಕಳೆದ ದಶಕದಲ್ಲಿ ಭಾರತದ ಆಹಾರ ಸುರಕ್ಷತೆಯ ಆಯಾಮವನ್ನು ಗಣನೀಯವಾಗಿ ಬದಲಾಯಿಸಿದೆ ಮತ್ತು ಹೊಸ ಹೊಸ ಸವಾಲುಗಳಿಗೆ ಹೊಂದಿಕೊಳ್ಳಲು ಮತ್ತು ಗ್ರಾಹಕರನ್ನು ಸಶಕ್ತಗೊಳಿಸಲು ನಿರಂತರವಾಗಿ ಕಾರ್ಯನಿರ್ವಹಿಸುತ್ತಿದೆ. ಬದ್ಧತೆ ಮತ್ತು ಸಮಗ್ರ ವಿಧಾನದ ಮೂಲಕ, ಆಹಾರ ಉತ್ಪಾದನೆಯಲ್ಲಿ ಮಾತ್ರವಲ್ಲದೆ ಆಹಾರ ಸುರಕ್ಷತೆ ಮತ್ತು ಸುಸ್ಥಿರತೆಯಲ್ಲೂ ಭಾರತವನ್ನು ಜಾಗತಿಕ ನಾಯಕನನ್ನಾಗಿ ಮಾಡುವ ಗುರಿಯನ್ನು ಎಫ್ ಎಸ್ ಎಸ್ ಎಐ ಹೊಂದಿದೆ.

ಜೈ ಹಿಂದ್!

## ಮಿಲಾನ್ ಫೌಂಡೇಶನ್ ವತಿಯಿಂದ ಗರ್ಲ್ ಐಕಾನ್ ಮಕ್ಕಳಿಗೆ ಉಚಿತ ಕಲಿಕಾ ಕಿಟ್ ವಿತರಣೆ



**ಕೊಪ್ಪಳ :** ಮಿಲಾನ್ ಫೌಂಡೇಶನ್ ವತಿಯಿಂದ ಕೊಪ್ಪಳ ಹಾಗೂ ರಾಯಚೂರ್ ಜಿಲ್ಲೆಯ ಗರ್ಲ್ ಐಕಾನ್ ಹೆಣ್ಣು ಮಕ್ಕಳಿಗೆ ಕೌಶಲ್ಯ ತರಬೇತಿ ಹಾಗೂ ಶಿಕ್ಷಣ ಪೂರಕವಾದ ಕಲಿಕಾ ಕಿಟ್ ಉಚಿತವಾಗಿ ವಿತರಿಸಲಾಯಿತು. ನಗರದ ವಿದ್ಯಾ ಸರಸ್ವತಿ ಪ್ರಾಥಮಿಕ ಶಾಲೆ ನಂದಿನಗರ ಈ ಕಾರ್ಯಕ್ರಮ ಜರುಗಿತು. ಕೊಪ್ಪಳ ನಲ್ಲಿ ಮಿಲಾನ್ ಫೌಂಡೇಶನ್ ನ ಯೋಜನೆ ಸಂಯೋಜಕರಾದ ಪೂಜಾ ಎಂ ಗಡಗಿ ನೇತೃತ್ವದಲ್ಲಿ ಕಾರ್ಯಕ್ರಮ ಮೂಡಿಬಂದಿತು. 14 ರಿಂದ 18 ವರ್ಷದ ಬಾಲಕಿಯರನ್ನು ಗರ್ಲ್ ಐಕಾನ್ ಅಂತ ಆಯ್ಕೆ ಮಾಡಿಕೊಳ್ಳುವ ಮೂಲಕ ಅವರಿಗೆ ಕೌಶಲ್ಯ ತರಬೇತಿ ಮತ್ತು ಕಲಿಕಾ ಕಿಟ್ ನೀಡಲಾಯಿತು. ಈ ಕಾರ್ಯಕ್ರಮಕ್ಕೆ ಕೊಪ್ಪಳ ಹಾಗೂ ರಾಯಚೂರು ಜಿಲ್ಲೆಯಿಂದ ಬಂದ 86 ಕ್ಕೂ ಅಧಿಕ ಹೆಣ್ಣು ಮಕ್ಕಳಿಗೆ ಮೊಬೈಲ್, ಬುಕ್ಸ್, ಬ್ಯಾಕ್, ಪೆನ್, ಟಿ ಶರ್ಟ್, ಐಡಿ ಕಾರ್ಡ್ ಗಳನ್ನು ಉಚಿತವಾಗಿ ನೀಡಲಾಯಿತು. ಈ ವೇಳೆ ಯೋಜನೆ ಸಂಯೋಜಕರಾದ ಪೂಜಾ ಎಂ ಗಡಗಿ ಮಾತನಾಡಿ ಗ್ರಾಮೀಣ ಭಾಗದ ಬಡ ಹೆಣ್ಣು ಮಕ್ಕಳು ಯಾವುದರಲ್ಲೂ ಕಡಿಮೆ ಇಲ್ಲ ಎಂಬುದನ್ನು ಹೇಳಿ ಕೊಡುವ ಮೂಲಕ ಬಾಲಕಿಯರಿಗೆ ಪ್ರೋತ್ಸಾಹಿಸಿದರು. ಮಿಲಾನ್ ಫೌಂಡೇಶನ್ 2007 ರಲ್ಲಿ ಅಸ್ತಿತ್ವಕ್ಕೆ ಬಂದಿತು. ಈ ಸಂಸ್ಥೆಯು ಸಾಮಾಜಿಕ ಅಭಿವೃದ್ಧಿ ಸಂಸ್ಥೆಯಾಗಿದ್ದು, ಕಿಶೋರಿಯರ ಸರ್ವಾಂಗೀಣ ಅಭಿವೃದ್ಧಿಗೆ ಹೆಚ್ಚು ಪ್ರೋತ್ಸಾಹಿಸಲಿದೆ.

ಮಹಿಳೆಯರ ಸಾಮರ್ಥ್ಯಗಳನ್ನು ಅಭಿವೃದ್ಧಿಪಡಿಸುವಲ್ಲಿ ಮತ್ತು ಅವರ ಕನಸುಗಳನ್ನು ನನಸಾಗಿಸುವಲ್ಲಿ ಈ ಸಂಸ್ಥೆಯು ಸಹಾಯಕವಾಗಿದೆ ಎಂದರು. ಸುರಕ್ಷಿತ, ಆರೋಗ್ಯವಂತ ಮತ್ತು ವಿದ್ಯಾವಂತ ಸಮಾಜದವನ್ನು ಸೃಷ್ಟಿಮಾಡುವಲ್ಲಿ ಮಿಲಾನ್ ಕಿಶೋರಿಯರಿಗೆ ಮಹತ್ವ ಪೂರ್ಣವಾಗಿ ಸಹಾಯವನ್ನು ಒದಗಿಸುತ್ತಿದೆ. ಮಿಲಾನ್ ಫೌಂಡೇಶನ್ ಕಳೆದ 17 ವರ್ಷಗಳಿಂದ ಭಾರತದಲ್ಲಿ ಸಕ್ರಿಯವಾಗಿ ಕಾರ್ಯನಿರ್ವಹಿಸುತ್ತಿದೆ. ಗ್ರಾಮೀಣ ಪ್ರದೇಶಗಳಲ್ಲಿ ಬಾಲಕಿಯರ ಸಬಲೀಕರಣದ ಮೇಲೆ ಗಮನ ಕೇಂದ್ರೀಕರಿಸಿ, ಪ್ರಸ್ತುತ ಈ ಸಂಸ್ಥೆಯ ಕಾರ್ಯಕ್ಷೇತ್ರವು ಮೂರು ರಾಜ್ಯಗಳಲ್ಲಿದೆ. ಉತ್ತರ ಪ್ರದೇಶ, ಮಧ್ಯಪ್ರದೇಶ ಮತ್ತು ಕರ್ನಾಟಕ ರಾಜ್ಯದಲ್ಲಿ ಬೇರೆ ಬೇರೆ ಸ್ಥಳಗಳ ಮೂಲಕ ಸಮಾಜಮುಖಿ ಕೆಲಸಗಳನ್ನು ಮಾಡುತ್ತಿದೆ ಎಂದರು.

ನಂತರ ಯೋಜನೆ ಸಂಯೋಜಕರಾದ ಪೂಜಾ ಎಂ ಗಡಗಿ ಮಾತನಾಡಿ, ಹೆಣ್ಣು ಮಕ್ಕಳು ಅಬಲೆಯರಲ್ಲ ಸಬಲೆಯರು ಎಂಬುದರ ಬಗ್ಗೆ ಪ್ರಸ್ತಾಪಿಸಿದರು. ಈ ಮಿಲಾನ್ ಫೌಂಡೇಶನ್ ಕರ್ನಾಟಕದಲ್ಲಿ 2017 ರಲ್ಲಿ ಸ್ಥಾಪಿತವಾಯಿತು. ಅಂದಿನಿಂದ ಇಂದಿನ ವರೆಗೆ ಸಾವಿರಾರು ಹೆಣ್ಣು ಮಕ್ಕಳು ಇದರ ಸದುಪಯೋಗ ಪಡೆದುಕೊಳ್ಳುತ್ತಿದ್ದಾರೆ. 14 ವರ್ಷದಿಂದ 18 ವರ್ಷದ ಒಳಗಿನ ಬಾಲಕಿಯರಿಗೆ ಕೌಶಲ್ಯ ತರಬೇತಿ ನೀಡುವ ಮೂಲಕ ಶಿಕ್ಷಣಕ್ಕೆ ಉಪಯೋಗವಾಗುವಂತಹ ಕಿಟ್ ನೀಡಲಾಗುತ್ತದೆ. ಈಗೀನ ಜಮಾಣದಲ್ಲಿ ಮಹಿಳೆಯರು ಹೇಗಿರಬೇಕು? ಅವರ ಪಾತ್ರ ಏನು? ಆರೋಗ್ಯದಲ್ಲಿ ಹೇಗಿರಬೇಕು? ಅವರ ಸುರಕ್ಷತೆ ಏನು ಎಂಬುದನ್ನು ತೋರಿಸಿಕೊಡಲು ಈ ಕಾರ್ಯಗಾರ ನಡೆಯಿತು ಎಂದರು. ಮಹಿಳೆ ಕೇವಲ ಭೋಗದ ವಸ್ತುವಲ್ಲ. ಅವಳು ಅಡುಗೆ ಮನೆಗೆ ಸೀಮಿತಳಲ್ಲ. ಹೆಣ್ಣು ಜಗದ ಕಣ್ಣು ಎಂಬುದನ್ನು ತೋರಿಸಿಕೊಡುವ ನಿಟ್ಟಿನಲ್ಲಿ ಈ ಕಾರ್ಯಕ್ರಮ ಜರುಗಿಸಲಾಗುತ್ತಿದೆ. ಗ್ರಾಮೀಣ ಅದರಲ್ಲೂ ಬಡ ಹೆಣ್ಣು ಮಕ್ಕಳ ಶಿಕ್ಷಣಕ್ಕೆ ಅನುಕೂಲ ಆಗಲೆಂದು ಆಯಾ ಕೋರ್ಸ್ ಗಳಿಗೆ ಅನುಗುಣವಾಗಿ ಸ್ಕಾಲರ್ಶಿಪ್, ಮೊಬೈಲ್, ಬುಕ್ಸ್, ಬ್ಯಾಗ್, ಡ್ರೆಸ್ ಕಿಟ್ ಗಳನ್ನು ಸಹ ನೀಡಲಾಗ್ತಿದೆ.

ಗರ್ಲ್ ಐಕಾನ್ ಮಹಿಳೆಯರು ಅಭಿವೃದ್ಧಿ ಹೊಂದಲು ರಾಜ್ಯಮಟ್ಟದ ಹಾಗೂ ರಾಷ್ಟ್ರಮಟ್ಟಕ್ಕೆ ತಲುಪಲು ಜೊತೆಗೆ ಸುರಕ್ಷಿತ ಮತ್ತು ಸಮಾನ ವೇದಿಕೆ ಕಲ್ಪಿಸಿ ಕೊಡುವಲ್ಲಿ ಪ್ರಯತ್ನ ನಡೆಸಿದೆ ಎಂದರು. ಈ ವೇಳೆ ಯೋಜನೆ ಸಂಯೋಜಕರಾದ ಲಕ್ಷ್ಮೀ ಪವಾರ್, ಯೋಜನೆ ಸಹಾಯಕರಾದ ರಾಧಿಕಾ, ವಿದ್ಯಾ, ಈಶ್ವರಿ, ರೋಶನಿ, ರಕ್ಷಿತಾ, ಸಾವಕ್ಕ, ಕೊಂತೆಮ್ಮ, ಸಿಂಧು, ಸೌಮ್ಯ, ದೀಪಾ, ಅಮೂಲ್ಯ, ಸೇರಿದಂತೆ ಅನೇಕ ಸಿಬ್ಬಂದಿಗಳು, ಗರ್ಲ್ ಐಕಾನ್ಸ್ ಹಾಗೂ ಪಾಲಕರು ಉಪಸ್ಥಿತರಿದ್ದರು.

"SIHI KAHI" Kannada Daily Morning, Editor, Owner, Publisher, Printer by **MARUTI BASAVANTAPPA HOASAMANI** Published from Chittaragi Cross, S.C. Colony, Ward No. 9, Amingada-587112, Tq. Hungund Dist : Bagalkot, Karnataka and Printed at **SUDIN PRINTERS**, Sector No. 33, Shop No. 38 & 40, Opp. Ambedkar Bhavan, **NAVANAGAR, BAGALKOT-587 101.** Dist : Bagalkot, Karnataka State